# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XIX 9 ಸೆಪ್ಟೆಂಬರ್ 1996

### ಈ ಸಂಚಿಕೆಯಲ್ಲಿ


| | | |
|---|---|---|
| 'ನೇಸರು' ಬಗ್ಗೆ ಬಂದ ಪತ್ರಗಳು | | 2 |
| ಅಸೋಸಿಯೇಷನ್ ಒಂದು ಸವಿನೆನಪು | • ಸೀತಮ್ಮ | 3 |
| 'ಅವ್ಯಕ್ತ' ಒಂದು ಅನಿಸಿಕೆ | • ಗೀತಾ ಚಂದ್ರಶೇಖರ್ | 5 |
| ಕವನ - ಸೇಡಿಯಾಪು ಸ್ಮೃತಿ | • ಡಾ. ಸುನೀತಿ ಉದ್ಯಾವರ | 5 |
| ತಂದೆಯವರ ನೆನಪುಗಳು | • ಶ್ರೀರಂಗನಾಯಕಿ | 6 |
| ಕಾ ತತ್ರ ಪರಿದೇವನಾ | (ಸಂಗ್ರಹ) | 7 |
| ಸಂದರ್ಶನ : ರಬ್ಬರ್ ಉದ್ಯಮದಲ್ಲಿ ಹೆಸರು ಮಾಡಿರುವ ಕನ್ನಡಿಗ ಶ್ರೀ ಧರ್ಮರಾಜ ಕುಲಕರ್ಣಿ | • ಎನ್. ಜಿ. ನವೀಲೇಕರ್ ಮತ್ತು ಎಮ್. ಎ. ಎನ್. ಪ್ರಸಾದ್ | 8 |
| ಹರಟೆ : ಬೇಸ್ತು | • ನಾಡಿಗರ್ ಗೋವಿಂದ ರಾವ್ | 10 |
| ಬೇಂದ್ರೆ ಕಂಡ ಶ್ರಾವಣ | • ಸುಮ ದ್ವಾರಕನಾಥ್ | 11 |
| ಸಂಮೋಹಿನಿ ಚಿಕಿತ್ಸೆ -9 | • ಡಾ|| ಉಷಾರಾವ್ | 14 |


The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

## 'ನೇಸರು' ಬಗ್ಗೆ ಬಂದ ಪತ್ರಗಳು:

ಓದುಗರೆ,

ನೇಸರು ಬಗ್ಗೆ ಫೋನ್ ಮೂಲಕವೂ ಹಲವಾರು ಸದಸ್ಯರು ಪ್ರತಿಕ್ರಿಯೆ ತೋರಿದ್ದಾರೆ. ಮಿಕ್ಕ ಓದುಗರೊಂದಿಗೆ ಹಂಚಿಕೊಳ್ಳುವಂತೆ ಅದನ್ನಿಲ್ಲಿ ದಾಖಲಿಸಲಾಗುತ್ತಿಲ್ಲ. ಮುಂಬೈನ ಗಡಿಬಿಡಿಯ ಬದುಕಲ್ಲಿ ಕೂತು ಬರೆಯುವಷ್ಟು ವ್ಯವಧಾನ ತೋರುವುದು ಕಷ್ಟ.

ಆದರೂ ಸಮಯ ಮಾಡಿಕೊಂಡು ಪತ್ರದಲ್ಲಿ ನಮ್ಮ ಪ್ರತಿಕ್ರಿಯೆ ತೋರಿ ಬರೆದ ಹಿತೈಷಿಗಳಿಗೆ ಧನ್ಯವಾದಗಳು.

— ಸಂಪಾದಕರು.

ಮಾನ್ಯ ಸಂಪಾದಕರು, 'ನೇಸರು' ಇವರಿಗೆ,

ಆಗಸ್ಟ್ 1996ರ 'ನೇಸರು' ಪ್ರಕಟಿಸಿದ ಶ್ರೀಮತಿ ಟಿ. ಸುನಂದಮ್ಮನವರ ಪತ್ರವನ್ನು ನೋಡಿ ಸಖೇದಾಶ್ಚರ್ಯವಾಯಿತು. ಕನ್ನಡದ ಹಿರಿಯ ಬರೆಹಗಾರ್ತಿಯೊಬ್ಬರ ಸಣ್ಣತನವನ್ನು ಅದು ತೆರೆದಿಟ್ಟಿದೆ. ಹಾಸ್ಯ ಪ್ರಧಾನವಾದ ಬರೆಹಗಳನ್ನೇ ಹೆಚ್ಚಾಗಿ ಬರೆದಿರುವ ಅವರ ಮನಸ್ಸು ಇಷ್ಟೇಕೆ ಸಂಕುಚಿತವಾಯಿತೋ ಗೊತ್ತಾಗುವುದಿಲ್ಲ. ``ಪತ್ರಿಕೆ ಮುಂಬಯಿ ಸುದ್ದಿಗೆ ಮೀಸಲಾದ್ದರಿಂದ ನನಗೆ ಆಸಕ್ತಿ ಮೂಡುವುದಿಲ್ಲ. (ಈ ಬಗ್ಗೆ ಹಿಂದೊಮ್ಮೆ ಬರೆದಿದ್ದೆ)" ಎನ್ನುವ ನಿಲುವು ಕೂಡಾ ಅಪಾಯಕಾರಿಯೇ ಆಗಿದೆ. ಅಂದರೆ, ಶ್ರೀಮತಿಯವರು ಬೆಂಗಳೂರಿನ ಲೇಖಕಿಯಾಗಿರುವುದರಿಂದ ಅವರನ್ನೂ, ಅವರ ಬರೆಹಗಳನ್ನೂ ನಿರ್ಲಕ್ಷಿಸುವ ಪೂರ್ಣ ಅಧಿಕಾರ `ಮುಂಬಯಿ ಕನ್ನಡಿಗ'ರಾದ ನಮಗೆ ಇದೆಯೆಂದಾಯಿತಲ್ಲವೇ? ನಮ್ಮ ಪ್ರೀತಿಯ ಲೇಖಕಿಯೊಬ್ಬರ ಅನುದಾರವಾದ ಈ ನಿಲುವಿನಿಂದ ಹುಟ್ಟಿದ ನೋವನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ಶ್ರೀಮತಿಯವರ ಪತ್ರವನ್ನು ಪ್ರಕಟಿಸುವ ಮೂಲಕ 'ನೇಸರು' ಪತ್ರಿಕಾ ಧರ್ಮವನ್ನು ಎತ್ತಿ ಹಿಡಿದಿದೆ. ಅಭಿನಂದನೆಗಳು.

— **ಡಾ| ಮಣಿಮಾಲಿನಿ, ವಿ. ಕೆ.**
A-10, Univ. Staff Qtrs.,
Vidyanagari, Mumbai-400 098.

* * *

ಸಂಪಾದಕರು,
'ನೇಸರು'
ಮುಂಬಯಿ-400 019.

ಮಾನ್ಯರೇ,

ಜುಲೈ ತಿಂಗಳ ನೇಸರು ತುಂಬ ಚೆನ್ನಾಗಿ ಹೊರಬಂದಿದೆ. ಈ ಸಂಚಿಕೆಯಲ್ಲಿ ವಿವಿಧ ಲೇಖನಗಳು ಸ್ವಾರಸ್ಯಪೂರ್ಣವಾಗಿದ್ದು ಓದಲು ತುಂಬ ಖುಷಿಯಾಯಿತು. ಮುಖ್ಯವಾಗಿ ಸ.ಬಿ.ಕು. ಅವರ 'ಬಲಿ' ಎಂಬ ಕತೆ ಚೆನ್ನಾಗಿ ಮೂಡಿ ಬಂದಿದೆ. ನಿಮಗೆ ಅಭಿನಂದನೆಗಳು.

ಇತೀ ನಿಮ್ಮ ವಿಶ್ವಾಸಿ

— **ಡಿ. ಕೆ. ಸುವರ್ಣ**

## CONGRATULATIONS



"Shreya Prasanna daughter of Mr. A. V. Prasanna & Mrs. Bharani Prasanna, has been awarded Scholarship in the High School Scholarship Exam conducted by Maharashtra State Govt. during Feb. '96. She is a student of J. B. Vachha High School, Dadar."

## ಸಾದರ ಸ್ವೀಕಾರ

ಪುಸ್ತಕದ ಹೆಸರು : ಹುಯಿಲಗೋಳ ನಾರಾಯಣ ರಾಯರು ಜೀವನ ಹಾಗೂ ಸಾಹಿತ್ಯ
ಲೇಖಕರು : ಡಾ. ಜಿ. ಡಿ. ಜೋಶಿ
ಪ್ರಕಾಶಕರು : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ
ಮೊದಲ ಮುದ್ರಣ: 1996
ದರ : 90 ರೂಪಾಯಿಗಳು

ಕನ್ನಡ ನವೋದಯ ಸಂದರ್ಭದ ಒಬ್ಬ ಮಹತ್ವದ ಸಾಹಿತಿಗಳಾದ ಹುಯಿಲಗೋಳ ನಾರಾಯಣರಾಯರ ಬದುಕು ಬರಹಗಳ ಬಗ್ಗೆ ಜಿ. ಡಿ. ಜೋಶಿಯವರು ಪಿ. ಎಚ್.ಡಿ.ಗಾಗಿ ಸಿದ್ಧಪಡಿಸಿದ ಮಹಾಪ್ರಬಂಧ. ನಾರಾಯಣ ರಾಯರ ಸಾಹಿತ್ಯವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಈ ಕೃತಿ ಸಾಹಿತ್ಯ ಕ್ಷೇತ್ರಕ್ಕೆ ಒಂದು ಮಹತ್ವಪೂರ್ಣ ಕೊಡುಗೆ

## SHREE SWARNA GOWRI & SHREE MAHAGANAPATHY POOJA MAHOTSAVA-1996

### -: PROGRAMME :-

| | |
|---|---|
| **Sunday** | **15.9.96** |
| 9.30 A.M. | Shree SWARNA GOWRI POOJA |
| 8.30 P.M. | Aarathi |
| **Monday** | **16.9.96** |
| 10.30 A.M. | ShreeMAHAGANAPATHY PRATISTAPANE & POOJA |
| 8.30 P.M. | Aarathi |
| **Tuesday** | **17-9-96** |
| 9.30 A.M. | Pooja |
| 7.30 P.M. | Carnatic Vocal Recital by Smt. Vijayalaxmi Nathan |
| 9.00 P.M. | Aarathi |
| **Wednesday** | **18-9-96** |
| 9.30 A.M. | Pooja |
| 7.30 P.M. | Carnatic Veena Recital by Smt. Geeta Ramchandra |
| 9.00 P.M. | Aarathi |
| **Thursday** | **19-9-96** |
| 9.30 A.M. | Pooja |
| 7.30 P.M. | Hindustani Classical Vocal Recital by Sri. Arun Kumar |
| 9.00 P.M. | Aarathi |
| **Friday** | **20-9-96** |
| 9.30 A.M. | Pooja |
| 7.00 P.M. | Arashina Kum Kuma for Ladies |
| 7.30 P.M. | Devotional Songs by "Sindhu Bhairavi" |
| 9.00 P.M. | Aarathi |
| **Saturday** | **21-9-96** |
| 9.30 A.M. | Pooja |
| 7.30 P.M. | Devotional Songs by Sri. Kiran Kamath |
| 9.00 P.M. | Aarathi |
| **Sunday** | **22-9-96** |
| 9.30 A.M. | Pooja |
| 10.00 A.M. | Veda Ghosha by Vaidikas of Sri. Shankar Muttam |
| 11.00 A.M. | Devotional Songs by Smt. Susheela Acharya & Party Followed by Blessings to the newly married couples Procession & Visarjana & Prasada Viniyoga |

# ಮುಂಬೈ ಮೈಸೂರ್ ಅಸೋಸಿಯೇಷನ್ ಸವಿನೆನಪು

ಸೀತಮ್ಮ ಆರ್. ರಾವ್



ಸೇಸಿಯಾಗಿ, ಗಿಡವಾಗಿ, ವಿವಿಧ ಸಾಂಸ್ಕೃತಿಕ ಹಾಗೂ, ಇತರೆ ಸಾಮಾಜಿಕ ಚಟುವಟಿಕೆಗಳ, ಮತ್ತು, ಇತರೆ ಕಾರ್ಯಕಲಾಪಗಳ ಕೊಂಬೆಗಳನ್ನೊಳಗೊಂಡು, ಬೃಹದಾಕಾರದ ಮರವಾಗಿ ಬೆಳೆದು, ತಲೆಯೆತ್ತಿ ನಿಂತಿರುವ, ಮುಂಬೈ ಕನ್ನಡಿಗರ ಹೆಮ್ಮೆಯ ಮೈಸೂರ್ ಅಸೋಸಿಯೇಷನ್, ಅದರ ಹುಟ್ಟು, ಬೆಳವಣಿಗೆ, ಮತ್ತು ತನ್ನದೇ ಆದ, ಸ್ವಂತ ಕಟ್ಟಡದ ನಿರ್ಮಾಣ ಯಾವಾಗಾಯ್ತು, ಹೇಗಾಯ್ತು, ಮತ್ತು ಅದಕ್ಕಾಗಿ ಕಾರಣಕರ್ತೃಗಳು ಯಾರ್‍ಯಾರು, ಮತ್ತು ಸಹಕಾರ ಸಹಾಯ ನೀಡಿದ ಮಾನ್ಯ ಮಹನೀಯರುಗಳು ಯಾರ್‍ಯಾರು, ಅವರುಗಳ ಕಾಲದಲ್ಲಿ ನಡೆಯುತ್ತಿದ್ದಂಥಾ ಕಾರ್ಯಕಲಾಪಗಳು ಅಂದ್ರೆ, ಆಟ, ಊಟ, ನೋಟ ಇದೆಲ್ಲಾ ಹೇಗೆ ನಡಿತಾ ಇತ್ತು, ಇದೆಲ್ಲಾ, ಈಗಾಗ್ಲೆ ಮಾನ್ಯ ಮಹನೀಯರುಗಳಾದ ಶ್ರೀಮಾನ್ ಕೇಶವ ಮೂರ್ತಿ, ಶ್ರೀಮಾನ್ ಗೋಪಾಲಯ್ಯ ಇವರುಗಳು, ತಾವುಗಳು ಮಾಡಿದ್ದ ಕೆಲಸ. ಮತ್ತು ತಮ್ಮಗಳ ಅನುಭವದ ಸವಿನೆನಪನ್ನು, `ನೇಸರು'ವಿನ ಓದುಗರಿಗೆ ತಿಳಿಸಿದ್ದಾರಲ್ಲದೆ, ಶ್ರೀಮಾನ್ ಆನಂದಂ, ಮತ್ತು ಶ್ರೀಮತಿ ಮಧುರ ಕೃಷ್ಣಸ್ವಾಮಿಯವರೂ ಸಹ, ತಮ್ಮಗಳ ಸವಿನೆನಪುಗಳನ್ನು ತಿಳಿಸಿದ್ದಾರೆ.

ನಾವು ಮುಂಬಯಿಗೆ ನೆಲಸಲು ಬಂದ ಹೊಸದ್ರಲ್ಲಿ, ಮೊದ್ಲು ದಾದರ್‌ನಲ್ಲಿದ್ದೆವು, ನಂತರ ಮಾತುಂಗ ಬಡಾವಣೆಗೆ ಬಂದೆವು. ಅಲ್ಲಿಗೆ ಬಂದ್ಮೇಲೆ, ನನ್ನೆಜಮಾನ್ರು ಅಸೋಸಿಯೇಷನ್ ಸದಸ್ಯರಾಗಿ ಆಗಾಗ್ಗೆ Cards ಆಡಲು ಅಲ್ಲಿ ಹೋಗ್ತಾ ಇದ್ದದ್ದರಿಂದ, ಅಲ್ಲಿಯ ಸಮಾಚಾರಗಳು, ಮತ್ತು ಅಲ್ಲಿಯ ಕಾರ್ಯಕಲಾಪಗಳಾಗಿದ್ದ ಆಟ, ಊಟ, ನೋಟ ಎಲ್ಲಾ ಅವರಿಂದ ತಿಳಿತಿತ್ತು. ನಾವು ಅಲ್ಲಿ ನಡೆಯುತ್ತಿದ್ದ, ಯಾವುದೇ ಕಾರ್ಯಕ್ರಮಕ್ಕೆ ಹೋಗ್ತೇ ಇದ್ವಿ, ಅಸೋಸಿಯೇಷನ್ನಿನ ಆಗಿನವರಾದ B. G. ಆಚಾರ್ಯ B. ನಾರಾಯಣಸ್ವಾಮಿ, R. ವೆಂಕಟೇಶಮೂರ್ತಿ ಮತ್ತು ಮಾಗಲ್ ಇವರುಗಳು ಆಡ್ತಾ ಇದ್ದ ನಾಟ್ಕಗಳನ್ನು ಮಾತ್ರ, ಮಿಸ್ ಮಾಡ್ಕೊತಾ ಇರಲಿಲ್ಲ. ಆಗ ಅವರುಗಳ ನಾಟ್ಕ ಆಗ್ತಾ ಇದ್ದದ್ದು, ನಪ್ಪೂ ಹಾಲ್‌ನಲ್ಲಿ ಮತ್ತು ಪರೇಲ್ ದಾಮೋದರ್ ಹಾಲ್‌ನಲ್ಲಿ.

ನಂತರ ಜಯಭೀಮ್ ರಾವ್, ಸುಬ್ ನರಸಿಂಹಯ್ಯ, ದಿವಂಗತ ಪುಟ್ಟಣ್ಣಯ್ಯ, ರಾಮ್‌ಚಂದ್ರ ರಾವ್ (M.N.), M. N. ಶಂಕರನಾರಾಯಣ ರಾವ್, ಸುಬ್ ರಾವ್, ಲಕ್ಷ್ಮಿರಮಣ, V. K. ಮೂರ್ತಿ (ಕುಟ್ಟಿ), ದಿವಂಗತ ದುಗ್ಗಪ್ಪಯ್ಯ, ಇವರೆಲ್ಲಾ ಅಂದಿನ ದಿನಗಳಲ್ಲಿ, ನಾಟ್ಕ ಆಡೋದ್ರಲ್ಲಿ, ಮಾಡೋದ್ರಲ್ಲಿ, ಹೆಸರುವಾಸಿಯಾಗಿದ್ದು, ಕ್ರಮೇಣ ಲಲಿತ ಕಲಾ ವಿಭಾಗ ಸ್ಥಾಪಿತವಾಯ್ತು, ಮೇಲೆ ಕೊಟ್ಟಿರುವ ಹೆಸರಿನವರೆಲ್ಲಾ ಅದರ ಸದಸ್ಯರಾಗಿದ್ರು, ಮತ್ತು ನಾಟ್ಕ ಆಡಲು ಬೇಕಾದ ಸಲಕರಣೆಗಳನ್ನೊಳಗೊಂಡ Stageನೂ ಸಿದ್ಧ ಮಾಡಿಕೊಂಡ್ರು, ಆಗ ಈಗಿನಂತೆ ಬೆಳಕಿನ ಸಂಯೋಜನೆ ಅಂದ್ರೆ, Spot Light, Dimmer, Flash Back, ಹಿನ್ನೆಲೆ ಮುನ್ನೆಲೆ Technique ಇದ್ಯಾವುದರ ಅನುಕೂಲ ಅಷ್ಟಾಗಿ ಇಲ್ದೇ ಇದ್ರೂ, ನಾಟ್ಕಗಳು ಯಶಸ್ವಿಯಾಗ್ತಾ ಇತ್ತು, ಮತ್ತು ಎಲ್ಲರ ಮೆಚ್ಚಿಕೆಯನ್ನೂ ಪಡೀತಿತ್ತು. ಆಗ ಹೆಣ್ಣಿನ ಪಾತ್ರ ಮಾಡಲು, ಹೆಂಗಸ್ರು ಯಾರೂ ಮುಂದೆ ಬರದೇ ಇದ್ದದ್ದರಿಂದ, ಸುಬ್ರಾವ್ ಮತ್ತು ಲಕ್ಷ್ಮಿರಮಣ, ಹೆಣ್ಣಿನ ಪಾತ್ರಕ್ಕೆ ಮೀಸಲಾಗಿದ್ರು, ಅವರಿಗೆ ಚೆನ್ನಾಗಿ ಒಪ್ತಾನೂ ಇತ್ತು, ಸಹಜವಾಗಿ ಅಭಿನಯಿಸುತ್ತಿದ್ರು, ಅಸೋಸಿಯೇಷನ್ ಅಲ್ಲದೆ, ಕೌವಾಸ್ಜಿ ಜಹಂಗೀರ ಹಾಲ್, ಪೊದಾರ್ ಕಾಲೇಜು ಅಲ್ಲೆಲ್ಲಾ ಆಡ್ತಾ ಇದ್ರು. ಅಸೋಸಿಯೇಷನ್ ಇತರೆ ಕಾರ್ಯಕ್ರಮಗಳಿಗಿಂತ, ನಾಟ್ಕಗಳಿಗೇ ಪ್ರಾಮುಖ್ಯತೆ ಅಂದಿಗೂ ಇತ್ತು ಮತ್ತು ಇಂದಿಗೂ ಇದೆ. ನಾಟ್ಕ ಅಸೋಸಿಯೇಷನ್ನಿನ ಒಂದು ಅಂಗ ಅಂತ ಹೇಳಬಹುದು.

ಸ್ವರ್ಣ ಗೌರಿ ಮತ್ತು ಗಣಪತಿಯನ್ನು (ಭಾದ್ರಪದ ಮಾಸದ) ಅಸೋಸಿಯೇಷನ್ ಅಂಗಣಕ್ಕೆ ಬರ ಮಾಡಿಕೊಂಡು, ಪೂಜೆ ನಡೆಸುವ ಏರ್ಪಾಡಾಗಿದೆಯಂತ ತಿಳಿದು ಬಂದದ್ರಿಂದ, ಪೂಜೆಯಲ್ಲಿ ಪಾಲ್ಗೊಳ್ಳಲು ಹೋಗಿದ್ವೆ, ಅದೇ ಮೊದ್ಲು ನಾವು ಅಸೋಸಿಯೇಷನ್‌ಗೆ ಕಾಲಿಟ್ಟಿದ್ದು. ಸ್ವರ್ಣ ಗೌರಿ ಮತ್ತು ಗಣಪತಿ ಪೂಜೆ, ಪ್ರತಿ ವರ್ಷ ನಡೆಯುವಂತೆ ನಾಂದಿ ಹಾಕಿದವರು, ಅಸೋಸಿಯೇಷನ್ ಸ್ಥಾಪಕರಲ್ಲೊಬ್ಬರಾಗಿದ್ದ, ದಿವಾನ್ ಬಹದ್ದೂರ್ ರಾಮಸ್ವಾಮಯ್ಯನವರು ಮತ್ತು ಅವರ ಪತ್ನಿ ಕಮಲಮ್ಮನವರು.

ಅವರ ಕಾಲದಲ್ಲಿ ಆಡಂಬರವಿಲ್ಲದ ಪೂಜೆ ನಡಿತಾ ಇತ್ತು, ನಂತರ B. ನಾರಾಯಣಸ್ವಾಮಿಗಳು ಅಧ್ಯಕ್ಷರಾಗಿ ಬಂದ ಮೇಲೆ, ತುಂಬಾ ಅದ್ದೂರಿಯಿಂದ, ವಿಜೃಂಭಣೆಯಿಂದ ನಡೆಸ್ತಾ ಇದ್ರು, ಏಳು ದಿನ ಗೌರಮ್ಮ ಗಣಪತಿಯನ್ನು ಇಟ್ಟಿರುತ್ತಿದ್ರು, ಪ್ರತಿ ದಿನ ಸಂಗೀತ, ನೃತ್ಯ, ನಾಟ್ಕಗಳ ಸೇವೆ ನಡೆಯುತ್ತಿತ್ತು, ಗೌರಮ್ಮ ಗಣಪತಿಯ ವಿಸರ್ಜನೆಯ ದಿನದ ವೈಭವವನ್ನು, ಶ್ರೀಮಾನ್ ಆನಂದಂ ಜುಲೈ ತಿಂಗಳ 'ನೇಸರು'ವಿನಲ್ಲಿ ವರ್ಣಿಸಿದ್ದಾರೆ. ಇಂದಿನವರೂ ಅಷ್ಟೇ ವಿಜೃಂಭಣೆಯಿಂದ ನಡೆಸ್ತಾ ಇದ್ದಾರೆ, ಆಚರಣೆಯಲ್ಲಿಯೂ ಅಷ್ಟಾಗಿ ವ್ಯತ್ಯಾಸ ಕಂಡು ಬರಲ್ಲ, ಆದ್ರೆ ಆಡಂಬರ ಅಬ್ಬರದಲ್ಲಿ ಸ್ವಲ್ಪ ವ್ಯತ್ಯಾಸ ಇದೆಯೇನೋ ಅಂತ ಅನ್ನಿಸುತ್ತೆ, ಆವಾಗೆಲ್ಲಾ ಪೂಜೆಗೆ ಮಹತ್ವ ಜಾಸ್ತಿ ಕೊಡ್ತಾ ಇದ್ರು. ಕಾಲಕ್ಕೆ ತಕ್ಕಂತೆ ಇರಬೇಕಾದ್ದು ಸಹಜವೆ ಇದೆ. ಅಲ್ವೆ? ಕಾಲಾಯ ತಸ್ಮೈ ನಮಃ Generation gap.

ಮತ್ತೆ ನಾವು ಅಸೋಸಿಯೇಷನ್‌ಗೆ ಹೋಗಿದ್ದು,


**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES, EAST WEST, MODI LUFT & JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

ಅದರ ಬೆಳ್ಳಿ ಹಬ್ಬಕ್ಕೆ, ಆಗ J. N. ಐಯರ್ ಅಧ್ಯಕ್ಷರಾಗಿದ್ರು. ಹಿಂದಿನ ನಮ್ಮ ಮೈಸೂರ್ ಮಹಾರಾಜರಾಗಿದ್ದ, ಜಯಚಾಮ ರಾಜೇಂದ್ರ ಒಡೆಯರ್‌ನ ಕರೆಸಿದ್ರು, ಆಗಿನ ಕಾರ್ಯಕ್ರಮಗಳು, ಅಸೋಸಿಯೇಷನ್‌ಗೆ ಮಾಡಿದ್ದ ತಳಿರು ತೋರಣಗಳ ಸಿಂಗಾರ, ಮತ್ತು ದೀಪಾಲಂಕಾರ ಕಣ್ಣು ತುಂಬುವ ನೋಟವಾಗಿತ್ತು. ಒಳ್ಳೆ ಸಂಭ್ರಮದಿಂದ ಬೆಳ್ಳಿ ಹಬ್ಬ ನಡಿತು. ಕಣ್ಣಿಗೂ ರಸದೌತಣವಾಗಿದ್ದು, ಅಂದಿನ ಅಡಿಗೆ ರಾಮಣ್ಣನ ಅಡಿಗೆ ರುಚಿ, ಬಾಯಿಗೂ ರಸದೌತಣವಾಗಿತ್ತು.

ಸಯ್ಯಾನ್‌ಗೆ ಬಂದ ಮೇಲೆ, ನಾನೂ ಅಸೋಸಿಯೇಷನ್ ಸದಸ್ಯೆಯಾಗಬೇಕು, ಅಲ್ಲಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು, ಅನ್ನೋ ಆಸಕ್ತಿ ಹುಟ್ಟಿತ್ತು. ಮತ್ತು ಆಗ ಅಸೋಸಿಯೇಷನ್ ಸದಸ್ಯೆಯರುಗಳಾಗಿದ್ದ ಕೆಲವರ, ಪ್ರೋತ್ಸಾಹವೂ ಸಿಕ್ಕಿದ್ದರಿಂದ ನಾನು ಸದಸ್ಯೆಯಾದೆ. ಆಗ ಅಸೋಸಿಯೇಷನ್‌ನಲ್ಲಿ ಸುಮಾರು 160 ಮಹಿಳಾ ಸದಸ್ಯೆಯರುಗಳಿದ್ರು, ಅವರುಗಳ ಕಾರ್ಯಕ್ರಮಗಳು ಜೋರಾಗಿ ನಡಿತಾ ಇತ್ತು. ಸಂಗೀತ ಸಾಹಿತ್ಯಗಳಲ್ಲದೆ ( ಒಮ್ಮೆ ನಾನು Conduct ಮಾಡಿದ್ದ ಒಂದು Orchestra ಆಯ್ತು, ಅಸೋಸಿಯೇಷನ್‌ನಲ್ಲಿ ನಡೆದ ನನ್ನ ಮೊದಲನೆಯ ಕಾರ್ಯಕ್ರಮ ಅದು) ಮಹಿಳೆಯರೇ ನಾಟ್ಯಗಳನ್ನು ಆಡ್ತಾ ಇದ್ರು. ಶ್ರೀಮತಿ ಶಾರದಮ್ಮ N. ಅವರು ಸಹ ಒಂದೆರಡು ನಾಟ್ಯಗಳಲ್ಲಿ ಅಭಿನಯಿಸಿದ್ರು, ಚೆನ್ನಾಗಿ ಮಾಡಿದ್ರು, ಕ್ರಮೇಣ, ಕೆಲವು ಮಹಿಳೆಯರು, ಲಲಿತ ಕಲಾ ವಿಭಾಗದವರು ಆಡ್ತಾ ಇದ್ದ ನಾಟ್ಯಗಳಲ್ಲೂ, ಭಾಗವಹಿಸಿ ಅಭಿನಯಿಸಲು ಮುಂದು ಬಂದ್ರು, ಅದಕ್ಕೆಲ್ಲಾ ಮೇಲ್ ಪಂಕ್ತಿ ಹಾಕಿ ಕೊಟ್ಟವರು, ಕೈಲಾಸಂರವರ ``ಬಂಡವಾಳವಿಲ್ಲದ ಬಡಾಯ್"ನಲ್ಲಿ, ಜಯಬೀಮ್ ರಾವ್ ಜೊತೆ ಅಭಿನಯಿಸಿದ್ದ, ಮಂದೂರ ಕೃಷ್ಣಸ್ವಾಮಿಯವರು. ನಂತರ ಲಕ್ಷ್ಮಿಸ್ವಾಮಿ, ಹಾಗೆ ಒಬ್ಬೊಬ್ಬರಾಗಿ ಗಂಡಸ್ರ ಜೊತೆ ಅಭಿನಯಿಸಲು, ರಂಗ ಭೂಮಿಗೆ ಕಾಲಿಟ್ರು.

ಕ್ರಮೇಣ ಕಾರ್ಯಕಾರಿ ಸಮಿತಿಯೊಂದಿಗೆ, ಮಹಿಳಾ ವಿಭಾಗ ಸ್ಥಾಪಿತವಾಯ್ತು, ಅಧ್ಯಕ್ಷೆಯ ಸ್ಥಾನಕ್ಕೆ, ದಿವಂಗತ ವೈದೇಹಿ ಚಾರ್ (Mrs. R. D. ಚಾರ್) ಆಯ್ಕೆಯಾಗಿ ಬಂದ್ರು. ಮಹಿಳೆಯರ ಇತರ ಚಟುವಟಿಕೆಗಳ ಜೊತೆಗೆ, ಕುಶಲ ಕಲೆಗಳನ್ನು ಕಲಿಯುವ ಏರ್ಪಾಡಾಯ್ತು, ಚಿತ್ರದ ಹೆಣಿಕೆಯಿಂದ, ವಿಧ ವಿಧವಾದ ಸುಂದರ ವಸ್ತುಗಳನ್ನು ಮಾಡುವುದು, ಕ್ರೇಪ್ ಪೇಪರ್‌ನಿಂದ ಮತ್ತು ಇತರೆ ಮಾಧ್ಯಮಗಳಿಂದ, ನಾನಾತರ ಹೂಗಳನ್ನು ಮಾಡುವುದು, ಬೊಂಬೆಗಳನ್ನು ಮಾಡುವುದು, ಕಸದಿಂದ ರಸಾಂತಾರಲ್ಲ ಹಾಗೆ, ವೇಸ್ಟ್ ಮೆಟೀರಿಯಲ್‌ನಿಂದ ನಾನಾತರದ ವಸ್ತುಗಳನ್ನು ತಯಾರಿಸುವುದು, ಕಪ್ಪೆ ಚಿಪ್ಪಿನಿಂದ, ಮರುಗಪಟ್ಟೆಪೆನೆ ಇಂದ ಹಿಡಿದು, ಹೂಗಳು ಮತ್ತು ಬೊಂಬೆಗಳನ್ನು ಜೋಡಿಸುವುದು (ಆಗ ಮಹಿಳಾ ವಿಭಾಗದ ಸದಸ್ಯೆಯಾಗಿದ್ದ ದಿವಂಗತ ಸರೋಜಮ್ಮ V. ಮತ್ತು ಶಾರದಮ್ಮ N. ಇವರಿಬ್ಬರೂ ಕಪ್ಪೆ ಚಿಪ್ಪಿನಿಂದ ಅನೇಕ ತರಹ ವಸ್ತುಗಳನ್ನು ಜೋಡಿಸುವುದರಲ್ಲಿ, ತುಂಬಾ ಜಾಣ್ಮೆಯುಳ್ಳವರೆನಿಸಿದ್ರು) ಇದನ್ನೆಲ್ಲಾ ಕಲಿಯಲು, ಅಸೋಸಿಯೇಷನ್ ಮಹಿಳೆಯರು ಉತ್ಸುಕರಾಗಿ ಬರುತ್ತಿದ್ರು. ವೈದೇಹಿ ಚಾರ್‌ರವರ ಕಾಲದಲ್ಲಿ, ಇದೆಲ್ಲಕ್ಕಿಂತಲೂ ಅತ್ಯಮೂಲ್ಯವಾದ, ಮತ್ತು ಅತೀ ಶ್ಲಾಘನೀಯವಾದ್ದು ನಡೆದದ್ದಂದ್ರೆ, ವಡಾಲಾದಲ್ಲಿರುವ ರಾಷ್ಟ್ರೀಯ ಕನ್ನಡ ಶಾಲೆಯ ಕಟ್ಟಡಕ್ಕೆ, ನಿಧಿ ಕೂಡಿಸುವುದು. ಅಸೋಸಿಯೇಷನ್‌ನ್ನ ಕೆಲವು ಮಹಿಳೆಯರು (ಮಹಿಳಾ ವಿಭಾಗದ) ಮನೆ ಮನೆಗೆ ಹೋಗಿ Newspapers (ಹಳೆ ಪೇಪರ್) ಸಂಗ್ರಹಿಸಿ, ಅದನ್ನು ಮಾರಿ ಬಂದ ಹಣವನ್ನು ಕಟ್ಟಡದ ನಿಧಿಗೆ ಕೊಡ್ತಾ ಇದ್ದದ್ದು. ಅದು ತುಂಬ ಯಶಸ್ವಿಯಾಗಿ ನಡೆಯಿತು.

ಪ್ರತಿ ವರ್ಷಕ್ಕೂ, ಮಹಿಳಾ ಕಾರ್ಯಕಾರಿ ಮಂಡಲಿ ಬದಲಾಗಿ, ಬೇರೆಯವರ ನೇಮಕವಾಗುತ್ತಿತ್ತು. ವೈದೇಹಿ ಚಾರ್ ನಂತರ, ದಿವಂಗತ ಶ್ಯಾಮಲಾಂಬ ವರದರಾಜನ್, 1956 or 57ರಲ್ಲಿ ಅಧ್ಯಕ್ಷೆಯಾಗಿ ಬಂದ್ರು, ಶಾರದಮ್ಮ N. ಮತ್ತು ಸುಮಿತ್ರಮ್ಮ ರಾವ್ ಕಾರ್ಯದರ್ಶಿಗಳಾಗಿದ್ರು. ನಾನು ಕಮಿಟಿನಲ್ಲಿದ್ದೆ. ಆಗ ಹಲವಾರು ಕಾರ್ಯಕ್ರಮಗಳು ನಡಿತಾ ಇತ್ತು. ಮುಂಬಯಿ ಮಹಾನಗರಕ್ಕೆ ನೀರನ್ನು ಒದಗಿಸುವ, ಸಣ್ಣ ಪುಟ್ಟ ನದಿಗಳ ಪೈಕಿ, ದೊಡ್ಡದಾದ ಮತ್ತು ಅತೀ ಮುಖ್ಯವಾದ ವೈತರಣಾ ನದಿಗೆ, ಅಣೆಕಟ್ಟು (Dam) ಕಟ್ಟುವ ಕೆಲಸ ನಡಿತಾ ಇತ್ತು. ಅದನ್ನು ನೋಡಲು, ಮಹಿಳಾ ವಿಭಾಗದವರನ್ನೆಲ್ಲಾ ಕರೆದು ಕೊಂಡು ಹೋಗಿದ್ರು. ಅಲ್ಲಿ ಚೆನ್ನಾಗಿ ಏರ್ಪಾಡು ಮಾಡಿದ್ರು, ಎಲ್ಲಾ ತುಂಬಾ Enjoy ಮಾಡಿದ್ರು, ಮಿಂಟಿಗೆ (ಹಣ ತಯಾರಿಸುವ) ಮತ್ತು ಇನ್ನೂ ಅನೇಕ ಕಡೆಗಳಿಗೆ ಭೇಟಿ ಇತ್ತು. ಪ್ರತಿ ತಿಂಗಳೂ ಏನಾದ್ರು ಒಂದು ಕಾರ್ಯಕ್ರಮ ಇರ್ತಾ ಇತ್ತು, ಆಟಗಳು, ಪಾಕ ಶಾಸ್ತ್ರ (Cooking Competition) ವಿವಿಧ ವಿನ್ಯಾಸಗಳನ್ನೊಳಗೊಂಡ, ಉಡಿಗೆ ತೊಡಿಗೆಗಳು (Fnacy Dress Competition) ಲಘು ಗೀತೆಗಳು ಇವುಗಳೆಲ್ಲದರ ಸ್ಪರ್ಧೆ ನಡಿತಾ ಇತ್ತು, ಕೆಲವು ಮುಖ್ಯವಾದ ಹಬ್ಬಗಳಲ್ಲಿ, ಅರಿಶಿನ ಕುಂಕುಮದ ಸಂಭ್ರಮದ ಜೊತೆಗೆ, ಮನರಂಜನೆಯ ಕಾರ್ಯಕ್ರಮ ಇದ್ದೇ ಇರ್‍ತಿತ್ತು. ಸಂಕ್ರಾಂತಿ ಹಬ್ಬದಲ್ಲಂತೂ, ಕುಸುರಿ ಕಾಳಿನಿಂದ ತಯಾರಿಸಿದ, ಸುಂದರವಾದ ಅಲಂಕಾರದ ವಸ್ತುಗಳ ಪ್ರದರ್ಶನದೊಂದಿಗೆ, ಸಂಗೀತ ಸೌರಭದ ಸವಿ, ಮತ್ತು ಯೆಳ್ಳು ಬೆಲ್ಲದ ಮಧುರ ಮಿಲನದ ಸವಿಸವಿದು, ಚಪ್ಪರಿಸೋ ಹಾಗೆ ಇರ್ತಾ ಇತ್ತು. ಅವರ ಕಾಲದಲ್ಲಿ, 1956ರಲ್ಲಿ ನಡೆದ ಮರೆಯಲಾರದಂಥ ವಸ್ತು ಪ್ರದರ್ಶನ (Exhibition) ಮೈಸೂರ್ ಕಡೆಯ ಉಡಿಗೆ ತೊಡಿಗೆಗಳು, ಮೈಸೂರ್ ಸಿಲ್ಕ್ ಸೀರೆಗಳು, ಗಂಧದ ಮರದಿಂದ ಮತ್ತು ದಂತದಿಂದ ತಯಾರಿಸಿದ, ಕುಶಲ ಕೈಗಾರಿಕೆಯ ವಸ್ತುಗಳು, ಇವುಗಳಲ್ಲದೆ, ಮಹಿಳಾ ವಿಭಾಗದ ಮಹಿಳೆಯರು ಮಾಡಿದ್ದಂಥಾ ನಾಜೋಕಿನ ವಸ್ತುಗಳಲ್ಲದೆ, ಮೈಸೂರ್ ಕಡೆಯ ರುಚಿ ರುಚಿಯಾದ ತಿಂಡಿಗಳು, ಊಟದ್ದು ಇವುಗಳಿಗೆಲ್ಲಾ ಬೇರೆ ಬೇರೆ Stall ಮಾಡಿ ಪ್ರದರ್ಶಿಸಿತ್ತು, ತುಂಬಾ ಜನರು ನೋಡಲು ತಂಡ ತಂಡವಾಗಿ ಬರುತ್ತಿದ್ದರು. ಮೂರು ದಿನ ಪ್ರದರ್ಶನ ನಡೆಯಿತು. ಕುಶಲ ಕೈಗಾರಿಕೆಗಳನ್ನು Judge ಮಾಡಲು, ತೀರ್ಪುಗಾರರನ್ನು ಕರೆಸಿತ್ತು, ಶ್ರೀಮತಿ ಶಾರದಮ್ಮನವರ ಮಾವಿನಕಾಯಿ ಗೊಜ್ಜು, ಉಪ್ಪಿನಕಾಯಿ, ಹುರಿಗಾಳು, ಚಕ್ಕಲಿ, ಕೋಡ್‌ಬಳೆ, ಮತ್ತೊಬ್ಬ ಮಹಿಳೆ (ದಿವಂಗತ ಪದ್ಮಮ್ಮ ಗೋಪಾಲಯಂಗಾರ್) ಮಾಡಿದ್ದ ಪುಳಿಯೋಗ್ರೆ, ಚಿರೋಟಿ ಇದೆಲ್ಲಾ ಬಿಸಿ ಬಿಸಿ ಭೋಂಡಾದ ಹಾಗೆ ಖರ್ಚಾಗ್ತಾ ಇತ್ತು ಮತ್ತು ಮಾರಾಟವೂ ಆಗ್ತಾ ಇತ್ತು, ಅದ್ನೆಲ್ಲಾ ಈಗ್ಲೂ ಜ್ಞಾಪಿಸಿಕೊಂಡ್ರೆ, ಬಾಯಲ್ಲಿ ನೀರೂರುತ್ತೆ. ಪ್ರದರ್ಶನದ ಕಡೆಯ ದಿನ, ಬಹುಮಾನ ವಿತರಣೆ ಆಯ್ತು. ತೀರ್ಪುಗಾರರು ನಿರ್ಣಯಿಸಿದ್ದಂತೆ, ಕುಶಲ ಕೈಗಾರಿಕೆಗಳ ವಸ್ತುಗಳ ಪೈಕಿ, ಎಂಬ್ರಾಯಿಡರಿ ಧಾರದಿಂದ, ನಾನು ಮಾಡಿದ್ದ ಕೆಲವು Wall Panelಗಳಿಗೆ, 1st, 2nd, 3rd ಮತ್ತು Consolation ಬಹುಮಾನಗಳಲ್ಲದೆ, ಅಸೋಸಿಯೇಷನ್‌ನ್ನ ಆಗಿನ ಗಣ್ಯ ವ್ಯಕ್ತಿಗಳ ಪೈಕಿ ಒಬ್ಬರಾಗಿದ್ದ, ದಿವಂಗತ ಸುಂದರ್ ರಾಜಯಂಗಾರ್‌ರ, ಸ್ಪೆಷಲ್ ಬಹುಮಾನ 50 ರೂ. ನಂಗೆ ಸಿಕ್ಕಿತ್ತು. ಬೆಲೆ ಕಟ್ಟಲಾರದ ಆ ಬಹುಮಾನಗಳು, ನನ್ನ ಕಲೆಗೆ ಬಂದದ್ದು ಇಂದಿಗೂ ಹೆಮ್ಮೆಯೆನಿಸುತ್ತೆ.

ನಾನು ಸುಮಾರು 1957 or 58ರಲ್ಲಿ ಅಧ್ಯಕ್ಷಳಾಗಿದ್ದೆ. ಇಂದ್ರಮ್ಮ D. ಐಯಂಗಾರ್ ಮತ್ತು ದಿವಂಗತ ಮುತ್ತುಮೂರ್ತಿ ಕಾರ್ಯದರ್ಶಿಗಳಾಗಿದ್ರು, ಜಯಮ್ಮ C. S. ಮತ್ತಿತರರು ಕಮಿಟಿಯಲ್ಲಿದ್ರು, ನನ್ನ ಹಿಂದಿನವರು ನಡೆಸುತ್ತಿದ್ದ ಕಾರ್ಯಕ್ರಮಗಳನ್ನೇ ನಾವು ಮುಂದುವರಿಸಿದೆವಾದ್ರು, ಇನ್ನೂ ಬೇರೆ ಬೇರೆ ಕಾರ್ಯಕ್ರಮಗಳನ್ನು ಮಾಡ್ತಾ ಇದ್ದೆವು. Textile Millsಗಳಾದ Paragon, Shakti ಮತ್ತು Godrej, Plastic Factory ಇದಕ್ಕೆಲ್ಲಾ, ಎರಡೆರಡು ಬಸ್

(ಪುಟ 15ಕ್ಕೆ)

# ಕಾದಂಬರಿ - 'ಅವ್ಯಕ್ತ' ಒಂದು ಅನಿಸಿಕೆ

ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಓದುಗರ ಮನಸ್ಸನ್ನು ಸೆರೆಹಿಡಿಯ ಬಲ್ಲುದು ಕಾದಂಬರಿ. ಜೀವನದ ಆಗುಹೋಗುಗಳಿಗೆ ಹಿಡಿದ ಕನ್ನಡಿಯಾಗುವುದರ ಜೊತೆಗೆ, ಓದುಗರಲ್ಲಿ ವೈಚಾರಿಕ ದೃಷ್ಟಿಯನ್ನು ಬೆಳೆಸುವುದೂ ಈ ಪ್ರಕಾರದ ಮುಖ್ಯ ಉದ್ದೇಶ. ಕಾದಂಬರಿ ಕ್ಷೇತ್ರದಲ್ಲಿ ಲೇಖಕಿಯರ ಕೃಷಿ ಫಲವತ್ತಾದುದೇ ಆದರೂ, ಹೆಣ್ಣಿನ ಜೀವನದ ವಿವಿಧ ಚಿತ್ರಗಳನ್ನು ಕೊಟ್ಟು ತೃಪ್ತರಾಗುವುದರಲ್ಲೇ ಮಿತಿಯನ್ನು ಕಂಡಿದ್ದಾರೆ ಎಂಬ ಟೀಕೆ ಆಗಾ ಕೇಳಿ ಬಂದಿದೆ. ಇದಕ್ಕೆ ಸವಾಲೆಂಬಂತೆ ಈ ದಶಕದಲ್ಲಿ ಒಂದು ಉತ್ತಮ ಪ್ರಯೋಗಶೀಲ ಕಾದಂಬರಿ `ಅವ್ಯಕ್ತ'ವನ್ನು ಓದುಗರ ಮುಂದಿಟ್ಟಿರುವ ಶ್ರೀಮತಿ ತಾರಾ ಭಟ್‌ರವರನ್ನು ಅಭಿನಂದಿಸಲೇ ಬೇಕು.

ಈ ಕಾದಂಬರಿ ಎರಡು ಭಾಗಗಳಲ್ಲಿ ನಿರೂಪಿತಗೊಂಡಿದೆ. ಕಾದಂಬರಿಯ ಘಟನೆಗಳು `ಬ್ರೌನ್ ಪಬ್ಲಿಸಿಟಿ ಕಂಪೆನಿ' ಎಂಬ ಜಾಹಿರಾತು ಸಂಸ್ಥೆಯೊಂದರ ಆಸುಪಾಸಿಗೆ ಸೇರಿದೆ. ತಮ್ಮ ಸ್ವಾರ್ಥದ ನೆಲೆಯಲ್ಲೇ ಬದುಕುತ್ತಾ, ಮಿಕ್ಕವರನ್ನು ಶೋಷಿಸುವ ಜನರ ವಿವಿಧ ಮುಖಗಳ ಪರಿಚಯ ಮೊದಲ ಭಾಗದ ಕಥಾ ನಿರೂಪಣೆಯಲ್ಲಿ ನಮಗೆ ಆಗುತ್ತದೆ. ಇಂತಹ ಪರಿಸರದಲ್ಲಿ ಸ್ವಾತಂತ್ರ್ಯದ ಅಭೀಪ್ಸೆ ಹೊಂದಿ, ಕಲಾವಿದೆಯಾಗಿ ತನ್ನನ್ನು ತಾನು ರೂಪಿಸಿಕೊಂಡು ಬದುಕಲು ಅಧಿತಿ ಬಯಸುವುದು ನಿಜವಾದ ವ್ಯಂಗ್ಯ.

ಹಿರಿಯ ಅಧಿಕಾರಿಯಾಗಿ ಈ ಕಂಪೆನಿಗೆ ಬರುವ ವಿದೇಶೀಯ ಜೋಸೆಫ್ ಕ್ಲಾರ್ಕ್, ಇಲ್ಲಿಯ ಜನರ ರೀತಿನೀತಿಗಳನ್ನು ಗ್ರಹಿಸಲು ಪ್ರಯತ್ನಿಸಿ ಸೋಲುತ್ತಾನೆ. ಆದರೆ ಇವೆಲ್ಲದರ ಅರ್ಥೈಸುವಿಕೆಯನ್ನು ಅಧಿತಿಯಿಂದ ನಿರೀಕ್ಷಿಸಿದಾಗ, ಅಲ್ಲಿಯೂ ಅವನಿಗೆ ಎದುರಾಗುವುದು ನಿರಾಸೆ. ಕಾರಣ ಅಧಿತಿಯ ಮರಣ.

ಎರಡನೆಯ ಭಾಗದಲ್ಲಿ, ಈ ಕಾದಂಬರಿಯ ಕೇಂದ್ರ ಪಾತ್ರವಾದ `ಅಧಿತಿ' ತಾನು ಆಯ್ದ ಹಾದಿಯಲ್ಲಿ ಮುನ್ನಡೆಯಲು ಪ್ರಯತ್ನಿಸಿ, ಒತ್ತಡಗಳಿಗೆ ಈಡಾಗಿ, ಪರಿಸ್ಥಿತಿಯ ಶಿಶುವಾಗಿ, ತನ್ನ ಹೋಕೆಗೆ ತಾನೇ ತತ್ತರಿಸುವ ನೋವಿನ ಚಿತ್ರವನ್ನು ಓದುಗರ ಮುಂದೆ ತೆರೆದಿಡುವ ಈ ನಿರೂಪಣೆ ಪ್ರಥಮ ಪುರುಷದಲ್ಲಿದೆ.

ಈ ಆಧುನಿಕ ಯುಗದಲ್ಲಿಯೂ ಮಾನವರಿಗೆ ತಮ್ಮ ಬಗ್ಗೆಯೂ ಕೂಡ ಒಂದು ಪ್ರಾಮಾಣಿಕ ಅಭಿಪ್ರಾಯ ಅಂಶ. ಇದು `ಅಧಿತಿ' ಎಂಬ ಪ್ರಶ್ನೆಯಲ್ಲಿ, ಬಿಚ್ಚಿಕೊಳ್ಳುತ್ತಾ, ಸತ್ಯವನ್ನು ಹುಡುಕಲು ಹಪಹಪಿಸುತ್ತಾ ಅದೇ ಮೃತ್ಯು ಪ್ರಶ್ನೆಯಾಗಿ ಕಾಡುವುದು ಓದುಗರ ಅರಿವಿಗೆ ಬರುತ್ತದೆ. ಈ ಅಂಶವನ್ನು, ಸಮರ್ಥಕವಾಗಿ ಪ್ರತಿಪಾದಿಸುವ ನಿಟ್ಟಿನಲ್ಲಿ ಕಥಾ ತಂತ್ರ ಸಫಲವಾಗಿದೆ.

ಅಭಿವ್ಯಕ್ತಿ ಮಾಧ್ಯಮವಾದ ಭಾಷೆ, ಇಲ್ಲಿ ಸಂಕೇತಗಳು, ಪ್ರತಿಮೆಗಳ ಮೂಲಕ (ಉದಾ. ಹಾರುವ ಹಕ್ಕಿಯ ಲಾಂಛನ, ಫೆವಿಕಾಲ್‌ನಲ್ಲಿ ಬಿದ್ದ ಹಲ್ಲಿ, ಇಂಬಳ ಇತ್ಯಾದಿ) ಪಾತ್ರಗಳ ಮಾನಸಿಕ ತುಮುಲಗಳ ಸಮರ್ಥ ಅಭಿವ್ಯಕ್ತಿಗೆ ಸಾಧ್ಯತೆ ನೀಡಿದರೂ, ಸಾಮಾನ್ಯ ಓದುಗರ ಗ್ರಹಣ ಶಕ್ತಿಗೆ ಮೀರಿದುದು ಎಂದೆನಿಸುತ್ತದೆ.

ಈ ಕಾದಂಬರಿಯನ್ನು ಓದಿದ ನಂತರ ನಮ್ಮನ್ನು ಕಾಡುವ ಪ್ರಶ್ನೆಗಳು ಹಲವಾರು.

ಈ ವೈಜ್ಞಾನಿಕ ಯುಗದಲ್ಲಿಯೂ ಹೆಣ್ಣು ಸ್ವತಂತ್ರ ಮನೋವ್ಯಕ್ತಿಯನ್ನು ಹೊಂದಿ, ತಾನು ಆಯ್ದ ಹಾದಿಯಲ್ಲಿ ನಡೆದು ಯಶಸ್ವಿಯಾಗಲಾರಳೇ? ಸುಪ್ತವಾದ ಅವಳ ಪ್ರತಿಭೆ, ಚಿಂತನಗಳು ಅವ್ಯಕ್ತದಲ್ಲಿಯೇ ಲೀನವಾಗಬೇಕೇ? ಸ್ತ್ರೀ - ಈ ಸಮಾಜ, ಬದುಕು - ನಿರೀಕ್ಷಿಸಿದುದನ್ನು ಪೂರೈಸುವುದರಲ್ಲಿಯೇ ತೃಪ್ತಿ ಪಡಬೇಕೇ, ಬದಲಾಗಿ ಪಡೆಯುವ ಯಾವುದೇ ಹಕ್ಕಿಲ್ಲವೇ? ಈ ಎಲ್ಲ ಸಂದೇಹಗಳು ನಮ್ಮನ್ನು ಕಾಡುವುದು ಸಹಜ.

ಇವುಗಳ ಬಗ್ಗೆ ಓದುಗರಲ್ಲಿ ಚಿಂತಿಸುವ ಮನೋಭಾವದಲ್ಲಿ, ಚಿಕಿತ್ಸಕ ದೃಷ್ಟಿಯನ್ನೂ ಬೆಳೆಸುವುದು ಲೇಖಕಿಯ ಉದ್ದೇಶ. ಸಮಾಜದ ಈ ಎಲ್ಲ ಅಡೆತಡೆಗಳನ್ನು ಪ್ರತಿಭಟಿಸಿ ಮುಂದುವರೆಯುವ ಸ್ಥೈರ್ಯವನ್ನು ಬೆಳೆಸುವ ನಿಟ್ಟಿನಲ್ಲಿ, ತನ್ಮೂಲಕ ನಮ್ಮ ಸಂವೇದನೆಯನ್ನು ಪಕ್ವಗೊಳಿಸುವಲ್ಲಿ ಲೇಖಕಿ ಯಶಸ್ವಿಯಾಗಿದ್ದಾರೆ.

ಲೇಖಕಿಯ, ಪಾಶ್ಚಾತ್ಯ ಸಾಹಿತ್ಯ, ತತ್ತ್ವ ದರ್ಶನಗಳ, ಅಧ್ಯಯನದ ಪ್ರಭಾವ ಈ ಕಾದಂಬರಿಯಲ್ಲಿ ಬಹಳವಾಗಿ ಕಂಡು ಬರುತ್ತದೆ.

ಹೀಗೆ ಭಿನ್ನ ದೃಷ್ಟಿಕೋನದಲ್ಲಿ, ಹೊಸ ಜಾಡಿನಲ್ಲಿ ಮೂಡಿ ಬಂದಿರುವ ಈ ಕಾದಂಬರಿ, ಲೇಖಕಿಯರ ಕಾದಂಬರಿಗಳ ಕಥಾ ವಸ್ತುವಿನ ಏಕತಾನತೆಯನ್ನು ಪರಿಹರಿಸಿ, ಹೊಸದಿಶೆಯತ್ತ ಸಾಗಲು ಮಾರ್ಗದಾಯಿಯಾಗಿದೆ. ಇಂತಹ ಸ್ತುತ್ಯ ಪ್ರಯತ್ನ ನಿರಂತರವಾಗಿ ಸಾಗಿ, ಶ್ರೀಮತಿ ತಾರಾ ಭಟ್‌ರವರಿಂದ ಉತ್ತಮ, ಪ್ರಯೋಗಶೀಲ ಕಾದಂಬರಿಗಳನ್ನು ಮತ್ತೂ ನಿರೀಕ್ಷಿಸಬಹುದೆಂದು ಆಶಿಸುತ್ತೇನೆ.

— **ಗೀತಾ ಚಂದ್ರಶೇಖರ್,**
ಡೊಂಬಿವಿಲಿ.

# ಸೇಡಿಯಾಪು ಸ್ಮೃತಿ

ಅಳಿದುಳಿದ ಪೀಳಿಗೆಯ
ಜ್ಯೋತಿ ನಂದಿತೆ ಇಂದು?
ಹಳಮೆಗಳ ಕತೆಗಾರ
ದಿವ್ಯಲೋಕಕೆ ಸಂದು?
ಹೆಚ್ಚು ಬರೆದವರಲ್ಲ
ನೆಚ್ಚಿ ಬರೆದವರವರು
ಕೆಚ್ಚು ತೋರಿದವರಲ್ಲ
ಮೆಚ್ಚುಗೆಯ ದೊರೆ ಅವರು.
ಕಾವ್ಯಪ್ರತಿಭೆಯ ಚಿಲುಮೆ
ಚಂದ್ರಖಂಡದ ಗರಿಮೆ
ಸಾಹಿತ್ಯದೈಸಿರಿಯ
ನೆತ್ತಿ ಸಾರಿದ ಮೇಲ್ಮೆ.
ವರ್ಣಗಳ ಪ್ರಕರಣವ
ವ್ಯಂಜನದ ಹಗರಣವ
ಸರಳತೆಲಿ ಬಣ್ಣಿಸಿದ
ಉದ್ದಾಮ ಪಂಡಿತರು.
ಸಕ್ಕದದ ರಸಹೀರಿ
ಕನ್ನಡಕೂ ಆದ ಸಾರಿ
ಛಂದಶಾಸ್ತ್ರದ ಲಹರಿ
ಹರಿಸಿಯವರಾ ಪ್ರಹರಿ.
ವ್ಯಾಕರಣ ದಿಗ್ಗಜರು
ಛಂದೋಗತಿ ರಚಿಸಿದರು
ತೋಕ ತಪ್ಪದೆ ಬರೆದ
ಕನ್ನಡ ಬೋಧಕರು.
ವೈದ್ಯಶಾಸ್ತ್ರದ ಅರಿವು
ವಿದ್ಯೆ ಬೋಧಿಪ ಒಲವು
ಪತ್ರಕರ್ತನ ಛಲವು
ಬೋಧ್ಯವಿರೆ ದಿಟ ಫಲವು.
ಭಾಷೆಗಳ ಪಾಂಡಿತ್ಯ
ಮಿಂಚಿರುವ ಸಾಹಿತ್ಯ
ಕನ್ನಡಕೆ ಹಂಚುತಲಿ
ಆಗಿಹರು ಕೃತಕೃತ್ಯ.
ನವದಶಕಕೂ ಮೀರಿ
ಸವೆಸಿಹರು ಜೀವನವ
ಭವದ ಬಂಧನ ತೊರೆದ
ಕವಿಗೆ ಬಾಗುವೆ ಶಿರವ.
ಇಂಥ ಸಜ್ಜನರಾರು?
ಅವರೆ ಸೇಡಿಯಾಪು
ಕೃಷ್ಣಭಟ್ಟರು ಸ್ವಾಮಿ
ಇದೇ ನನ್ನ ತೀರ್ಪು.

— **ಡಾ| ಸುನೀತಿ ಉದ್ಯಾವರ.**

# ತಂದೆಯವರ ನೆನಪುಗಳು

● ಶ್ರೀರಂಗನಾಯಕಿ

`ಕನ್ನಡದ ಆಸ್ತಿ ಮಾಸ್ತಿ' ಎಂಬ ಮಾತು ಕನ್ನಡದ ಜನತೆಗೆ ಮನೆ ಮಾತಾಗಿದೆ. ಇಂತಹ ಮಹಾನುಭಾವರನ್ನು ತಂದೆಯಾಗಿ ಪಡೆದದ್ದು ನನ್ನ ಪೂರ್ವ ಜನ್ಮದ ಸುಕೃತವೇ ಸರಿ. ಇವರ ಸಾಹಿತ್ಯದ ಬಗ್ಗೆ ಬಹಳಷ್ಟು ಲೇಖನಗಳು, ಪ್ರಬಂಧಗಳು ಹೊರ ಬಂದಿವೆ. ಆದರೆ ಮಾಸ್ತಿಯವರು `ಮುತ್ತಣ್ಣಾ' (ಅವರ ಕುಟುಂಬದವರು ಕರೆಯುತ್ತಿದ್ದ ಅಕ್ಕ ಹೆಸರು) ಆಗಿ, ನಮ್ಮ ಜೊತೆಯಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದರೆಂಬುದನ್ನು ನಿಮ್ಮೊಂದಿಗೆ ಹಂಚಿ ಕೊಳ್ಳಲು ಪ್ರಯತ್ನಿಸಿದ್ದೇನೆ.

ಮೊಟ್ಟಮೊದಲು ನಮ್ಮ ಗಮನ ಸೆಳೆಯುವುದು ನಮ್ಮ ತಂದೆ ತಾಯಿಯವರ ದಾಂಪತ್ಯ ಜೀವನ. ಮನೆಯಲ್ಲಿ ಯಾವಾಗಲೂ ಒಂದು ಸಮಾಧಾನಕರವಾದ, ಶಾಂತ ವಾತಾವರಣ ಇರುತ್ತಿತ್ತು. ತುಂಬಿದ ಮನೆ, ಹತ್ತಾರು ಮಂದಿ ನೆಂಟರಿಷ್ಟರು ಬರುತ್ತಿದ್ದರು. ತೊಂದರೆಗಳು ಹಲವಾರು, ಆದರೆ ಕೂಗಾಟ, ಜಗಳ ಅಸಮಾಧಾನಗಳ ಸುಳಿವೇ ನೆನಪಿಲ್ಲ.

ನಮ್ಮ ತಂದೆಯವರು ತಾವು ತಮ್ಮ ಕೆಲಸ ಬರವಣಿಗೆ - ಇದನ್ನು ತಾವು ಇಟ್ಟುಕೊಂಡು ಮನೆಯ ನಿರ್ವಹಣೆಯನ್ನು ನಮ್ಮ ತಾಯಿಯವರಿಗೇ ಒಪ್ಪಿಸಿ ಬಿಟ್ಟಿದ್ದರು. ಸೌ. ಪಂಕಜಮ್ಮನವರು, ತಮ್ಮ ಜವಾಬ್ದಾರಿಯನ್ನು ಮುತ್ತಣ್ಣಾ ಅವರ ಒಪ್ಪಿಗೆಗೆ ಸರಿಯಾಗಿ ನಡೆಸಿಕೊಟ್ಟರು. ಇಬ್ಬರಿಗೂ ಸರಿಯಾದ ಜೋಡಿ, ಇಂಗಿತವನ್ನು ಅರಿತು ಮಾಡುವ ಸ್ವಭಾವ - ಅದ್ದರಿಂದ ಅಲ್ಲಿಗೆ ಹೋದಾಗ, ನಮ್ಮ ಮನೆ ಒಂದು ತಪೋವನದ ಹಾಗೆ ಶಾಂತವಾದ ವಾತಾವರಣವಿದ್ದಿತು.

ನಮ್ಮ ಮನೆಯಲ್ಲಿ, ನಾವು ಆರು ಹೆಣ್ಣು ಮಕ್ಕಳು, ನಮ್ಮ ತಾಯಿ, ತಂದೆ, ಅಜ್ಜಿ, ಚಿಕ್ಕಮ್ಮ, ಅವರ ಮೂರು ಮಕ್ಕಳು, ಚಿಕ್ಕ ಚಿಕ್ಕಮ್ಮ ಚಿಕ್ಕಪ್ಪ - ಮತ್ತೆ ಓದುವ ಹುಡುಗರು (ವಿದ್ಯಾರ್ಥಿಗಳು) - ಮೂರು ಅಥವಾ ನಾಲ್ಕು ಜನ, ಇಷ್ಟು ಜನ, ಜೊತೆಗೆ ಬಂದು ಹೋಗುವವರು, ಖಾಯಿಲೆಗಾಗಿ ಹಳ್ಳಿಯಿಂದ ಬಂದವರು, ಹತ್ತಿರದ ಬಂಧುಗಳು, ಅವರ ಮಕ್ಕಳ ಮದುವೆ ಮುಂಜಿ, ಹೀಗೆ ಒಂದಾದ ಮೇಲೆ ಒಂದು ಎಷ್ಟೋ ಶುಭಕಾರ್ಯಗಳು ನಡೆಯುತ್ತಿದ್ದುವು. ಶ್ರೀರಾಮ ಪಟ್ಟಾಭಿಷೇಕ, ಯುಗಾದಿಯಲ್ಲಿ, ನವರಾತ್ರಿಯಲ್ಲಿ, ನಡೆಯುತ್ತಿದ್ದಿತು. ಇದೆಲ್ಲದರಿಂದ ನಮಗೆ ಸಹ ಜೀವನ, ಆ ಕಾಲದ ಮರ್ಯಾದೆ, ಅತಿಥಿಗಳನ್ನು ಆದರಿಸುವುದು ಸಹಜವಾಗಿ ಬಂದಿತು.

ಓದು, ಬರಹ, ಸಂಗೀತ, ಭಾಷಾ ಪ್ರಜ್ಞೆ - ದೇಶ ಪ್ರೇಮ, ಒಡನಾಡಿಗಳೊಡನೆ ನಲಿಯುತ್ತ ಇರುವುದು. ತಾವಾಗಿಯೇ ನಮಗೆ ಶಿಸ್ತು ಕಲಿಸಿದುವು. ಬಹಳ ಸಲಿಗೆ ಇಲ್ಲದಿದ್ದರೂ, ಆಗಾಗ ಬಂದು ವಿಚಾರಿಸಿಕೊಂಡು ತಿಳಿದುಕೊಳ್ಳುವರು.

ಒಬ್ಬರಿಗಿಲ್ಲದೆ, ಇನ್ನೊಬ್ಬರಿಗೆ ಕೊಡುವುದು, ಅಥವಾ ತಿನ್ನುವುದು, ಊಟ ಉಪಚಾರಗಳಲ್ಲಿ ಭೇದ, ಮಾಡುವುದು ಇದೆಲ್ಲ ನಮಗೆ ತಿಳಿದೇ ಇರಲಿಲ್ಲ. ಇರುವುದನ್ನು ಎಲ್ಲರಿಗೂ ಹಂಚಿ, ನಾವೂ ತೆಗೆದು ಕೊಳ್ಳಬೇಕು. ಓದುವ ಹುಡುಗರಿಗೆ ಯಾವ ಕೆಲಸವನ್ನೂ ಹೇಳ ಕೂಡದು. ಇದು ನಮಗೆ ಚಿಕ್ಕಂದಿನಿಂದ, ಬಂದ ನಡತೆ.

Library ಇದ್ದದ್ದರಿಂದ, ಯಾರಾದರೂ ಮಾಡಿ ಮೇಲೆ ಹೋಗಿ ಓದಿ ಕೊಳ್ಳುವುದು ಮತ್ತೆ ಭದ್ರವಾಗಿ ಎತ್ತಿಡಬೇಕು. ವಿದ್ಯಾಭ್ಯಾಸಕ್ಕೆ ಮಹತ್ವವಾದ ಬೆಲೆಯುಂಟು. ಆ ಅಗತ್ಯ ನಮಗೆ ಮೊದಲು ಗೊತ್ತಿರಲಿಲ್ಲ. ಈಗ ಗೊತ್ತಾಗುತ್ತದೆ. ನಾನಂತೂ, ರಾಮಾಯಣ, ಮಹಾಭಾರತ, Galswortly, Wordsworth - ಮುಂತಾದ ಪುಸ್ತಕಗಳನ್ನೆಲ್ಲ ಓದಿದ್ದೇನೆ - ಈಗ ಮರೆತೂ ಇದ್ದೇನೆ.

Shakespeare Translation ಮಾಡುವಾಗ ನಮಗೆ ಎದುರಿಗೆ ಕವಿ ನಿಂತು ಕನ್ನಡದಲ್ಲಿ ಮಾತನಾಡಿದ ಹಾಗೆ ಆಗುತ್ತಿತ್ತಂತೆ. ದೇಶ ಭಕ್ತಿಗೆ ಅಗ್ರಸ್ಥಾನ. ನಾವು ಹುಟ್ಟಿದಾಗ ``ಮಾತೇ ಭಾರತ ಮಾತೇ'' ಎಂಬ ಪದ್ಯವನ್ನು ಬರೆದರು. ದೇವರಲ್ಲಿ ಅಚಲವಾದ ಭಕ್ತಿ. ಕಷ್ಟ ಬಂದರೆ ಹಳಿಯುವುದು, ಒಳ್ಳೆಯದಾದರೆ ಮರೆಯುವುದು. ಇದು ಹರುಕು ಮುರುಕು - ಏನು ಬಂದರೂ ದೇವರ ಚಿತ್ತ ಎಂದು ಮಣಿಯುವುದು ಒಂದೇ ಮಾರ್ಗ.

ಕೆಲವು ಸಂದರ್ಭಗಳನ್ನು ವಿವರಿಸಿದರೆ, ನಮಗೆ ಮುತ್ತಣ್ಣಾ ಅವರ ಸ್ವಭಾವ ಸ್ಫುಟವಾಗುತ್ತದೆ.

ವಿದ್ಯೆಯಲ್ಲಿ ಪರೀಕ್ಷೆ ಹತ್ತಿರ ಬಂದರೆ - ಬಂದದ್ದು ಬರೆದು ಬಿಟ್ಟು ಬಾ ಎಂದು ಧೈರ್ಯ ಹೇಳುವರು. ಮತ್ತೆ ನೂರಕ್ಕೆ, ಎಂಭತ್ತು ಬಂದಿದೆ ಎಂದು ತೋರಿಸಿದರೆ - ``ಇಪ್ಪತ್ತು ಕಡಿಮೆ!'' ಎನ್ನುವರು.

ಸಂಗೀತದಲ್ಲಿ ಅಭಿರುಚಿ ಇತ್ತು, ಸ್ವಲ್ಪ ದಿನ ಪಿಟೀಲು ಕಲಿತರು. ರಾಗಗಳೆಲ್ಲ ಗೊತ್ತು, ತಾವು ಬರೆದ ಪದ್ಯಗಳಿಗೆ, ತಾವೇ ರಾಗ ಹಾಕಿ ನಮ್ಮ ಕೈಯಲ್ಲಿ ಹಾಡಿಸುವರು. ಶ್ರೀ ಕುರುಡಿ ವೆಂಕಣ್ಣಾಚಾರ್ ಅವರನ್ನು ಮನೆಗೆ ಕರೆಸಿ ಅವರೆದುರಿಗೆ, ನನ್ನ ಕೈಯಲ್ಲಿ ಹಾಡಿಸಿದರು. R. K. Srikanthan, ಮುಂತಾದ ವಿದ್ವಾಂಸರುಗಳು ಕಛೇರಿಯಲ್ಲಿ ಹಾಡಿದ್ದಾರೆ.

ಮನೆಯಲ್ಲಿ ಆಗಾಗ್ಗೆ ಜನರನ್ನು ಕರೆಸಿ, ಭಾರತ ವಾಚನ, ಕತೆಗಳನ್ನು ಓದಿಸುವುದು, ಇದನ್ನೆಲ್ಲ ಚಿಕ್ಕ ಪೀಳಿಗೆಗಾಗಿ, ಮಾಡುತ್ತಿದ್ದರು. ಅವರಿಗೆ ಆಸಕ್ತಿ ಹುಟ್ಟಿ ಅವರೂ ಬರೆಯಲಿ ಎಂದು ಹುರಿದುಂಬಿಸುವರು. ಕೆಲವು ನಿದರ್ಶನಗಳನ್ನು ಕೊಟ್ಟರೆ ನಮಗೆ ಅವರ ಸ್ವಭಾವ ತಿಳಿಯುತ್ತದೆ.

ನನಗೆ B.A. I Class, I Rank Pass ಆಯಿತು. ಆಗ ನಾವು ಊರಲ್ಲಿರಲಿಲ್ಲ. ಬಂದರೆ `ಏನು ಹೇಳುತ್ತಾಳೆ - ನನ್ನ B.A. ಮಗಳು' ಎಂದು ಕೇಳಿದರು. ನಾನು ಸುಮ್ಮನೆ ನಕ್ಕು ಬಿಟ್ಟೆ. `ಮನಸ್ಸು ಮಲ್ಲಿಗೆಯ ಹಾಗಿರಬೇಕು? ಏನಮ್ಮ'' ಎಂದರು.

ಬಡವರನ್ನು ಕಂಡರೆ ಅನುಕಂಪ. ಒಬ್ಬ ಮೋಚಿ ಇದ್ದ, ತಿಂಗಳಿಗೊಮ್ಮೆ ಬರುತ್ತಿದ್ದ. ಅವನಿಗೆ, ಯಾವುದೋ ಚಪ್ಪಲಿ ಕೊಟ್ಟು ರಿಪೇರಿ ಮಾಡು ಎಂದು ಹೇಳಿ ಒಂದಕ್ಕೆರಡು ದುಡ್ಡು ಕೊಟ್ಟು ಕಳುಹಿಸುವವರು. ನಮ್ಮ ಅಕ್ಕ ನೂಲು ಚರಕದಲ್ಲಿ ನೂತು, ಖಾದಿ ಭಂಡಾರದಲ್ಲಿ ಜರಿ ಪಂಚೆ ನೇಮಿಸಿ ದೀಪಾವಳಿಗೆಂದದು ಮುತ್ತಣ್ಣ ಅವರಿಗೆ ಕೊಟ್ಟರು. ಇವರು ಅದನ್ನು ಉಡದೇನೇ ಆ ಮೋಚಿಗೆ ಕೊಟ್ಟು ಬಿಟ್ಟರು. ನಮ್ಮ ಅಕ್ಕನಿಗೆ ದುಃಖ. ಮುತ್ತಣ್ಣ ``ಅವನಲ್ಲೂ, ದೇವರಿದಾನಮ್ಮ'' ಎಂದರು.

ನಮ್ಮ ಕೊಳಾಯಿ ಒಂದು ದಿನ ಕೆಟ್ಟು ಹೋಯಿತು. ವಾಡಿಕೆಯಂತೆ ಒಬ್ಬ ರಿಪೇರಿಯವನು ಬಂದು ಸರಿ ಮಾಡಿದ. ತಾಯಿ ಹಣ ಕೊಟ್ಟರು - ಕೊಳಾಯಿ ಇನ್ನೂ ಸುರಿಯುತ್ತಲೇ ಇದೆ! ಆಗ ಸರಿ ಮಾಡು ಎಂದು ನಾವೆಲ್ಲ ಮತ್ತೆ ಹೇಳಿದೆವು. ಮುತ್ತಣ್ಣಾ ಏನು ಗಲಾಟೆ, ನೋಡುವುದಕ್ಕೆ ಬಂದರು. ಹೊಗಲ

ಮೇಲೆ, ಪಾರಾಯಣ ಮಾಡುವಾಗ ಶ್ರೀ ಮನ್ಮಹಾರಾಜರು ಕೊಟ್ಟ ಶಾಲನ್ನು ಅವರ, ಅವರ ಕುಟುಂಬದ ಕ್ಷೇಮಕ್ಕಾಗಿ ಹಾಕಿ ಕೊಂಡಿದ್ದರು. ಅವರಿಗೆ ಆಳಿನ ಮೇಲೆ ಬಹಳ ರೋಷ ಬಂದಿತು. ಆ ಶಾಲಿನಿಂದಲೇ ಎರಡು ಏಟು ಕೊಟ್ಟರು. ಕೂಡಲೇ ಕೋಪ ಇಳಿಯಿತು. ರಿಪೇರಿ ಮಾಡದೆ ಏಕೆ ದುಡ್ಡು ತೆಗೆದು ಕೊಂಡೆ? ಈಗ ಸರಿ ಮಾಡು ಎಂದು ಅವನಿಗೆ ಮೈ ದಡವಿ, ಊಟ ಹಾಕಿ, ದುಡ್ಡು ಮತ್ತೆ ಕೊಟ್ಟು ಕಳುಹಿಸಿದರು.

ಪ್ರಶಸ್ತಿ ಪಡೆದ ಚಿಕ್ಕವೀರ ರಾಜೇಂದ್ರ ಕಾದಂಬರಿಗೋಸ್ಕರ ಕೊಡಗಿನಲ್ಲಿ ಪ್ರವಾಸ ಮಾಡಿ, ನಿಜವಾದ ರಿಕಾರ್ಡುಗಳನ್ನು ಸಂಗ್ರಹಿಸಿ ಬಹಳ ಚೆನ್ನಾಗಿ ಬರೆದರು. ಕೆಲವರು ಬಹಳ ತಡ ಮಾಡಿ ಬಂದಿತು ಎಂದರು. ಕೆಲವರು ಅದು ಸರಿಯಿಲ್ಲ ಎಂದರು. ಮುತ್ತಣ್ಣ ಹೇಳಿದರು ಮನೆಯಲ್ಲಿ ಜಿಲೇಬಿ ಮಾಡಿ ಕಾಕನಿಗೆ ಮೊದಲು ಕೊಡುವುದಿಲ್ಲ. ಮೊಮ್ಮಕ್ಕಳಿಗೇ ಮೊದಲು. ಯಾವಾಗ ಬಂದರೂ ಸಂತೋಷವೇ ಎಂದು.

ಪ್ರಶಸ್ತಿಯವರು ಅದನ್ನು ನಿಮಗೇ ಕೊಡುತ್ತೇವೆ. ಆದರೆ ಬೇರೆ ಪುಸ್ತಕಕ್ಕಾಗಿ ಎಂದರು. ಮುತ್ತಣ್ಣ ಕೊಟ್ಟರೆ ಹೆಸರಿರುವುದಕ್ಕೆ, ಇಲ್ಲದಿದ್ದರೆ ಬೇಡ, ಎಂದು ಒಂದೇ ಪಟ್ಟು ಹಿಡಿದರು. ಅದಕ್ಕೇ ಬಂತು.

ನಮಗೂ ಅದು ಬಹು ಹೆಮ್ಮೆಯ ವಿಷಯ.

ಒಂದು ಸ್ವೆಟರ್ ಹಾಕಿ ಕೊಟ್ಟು ``ಅಳತೆ ಸರಿಯಾಗಿದೆಯೆಂದು ನನ್ನ ನಂಬಿಕೆ. ಹಾಗಿಲ್ಲದಿದ್ದರೆ ಅದಕ್ಕೆ ಸರಿಯಾಗುವುದು ನಿಮ್ಮ ಭಾರ" ಎಂದು ಕಾಗದ ಬರೆದೆ. ಅದಕ್ಕೆ ಅವರು ``ಇದಕ್ಕೆ ಸರಿಯಾಗಬೇಕಾದರೆ ನಾನು `ಭಾರವೇ' " ಆಗ ಬೇಕು ಎಂದರು.

ಮತ್ತೊಮ್ಮೆ ಮಳೆಗಾಲ. ಮೋಡ ಕವಿದು ಕೊಂಡಿತ್ತು. ಬೆಳಗ್ಗೆ ಕಾಫಿ ಜೊತೆಗೆ ಅಮ್ಮ ಹುರಿ ಹಿಟ್ಟು ಕೊಟ್ಟಿದ್ದರು. ಊಟಕ್ಕೆ ಕೂತರೆ ಹಸಿವಿಲ್ಲ. ಮುತ್ತಣ್ಣ "ಹುರಿ ಹಿಟ್ಟಿನಿಂದ ಹೊರಗೆ ಇರುವ ಹಾಗೆ ನನ್ನ ಹೊಟ್ಟೆಯಲ್ಲಿಯೂ ಕರಿಯ ಮೋಡ'' ಎಂದರು. ಅಂತಹ ಮಾತಿನ ಚಮತ್ಕಾರ.

ನಮ್ಮ ತಂದೆಯವರು ಏನನ್ನೂ ಬರೆದರೋ, ಹೇಳಿದರೋ ಅದರಂತೆ ನಡೆದು ಕೊಂಡರು. ಅವರ ಜೀವನವೇ ನಮಗೆ ಒಂದು ನೀತಿ ಕಥೆ. ಇಂತಹವರು ಬಹಳ ವಿರಳ.

●

# ಕಾ ತತ್ರ ಪರಿದೇವನಾ

ಭಗವದ್ಗೀತೆಯ ಎರಡನೆಯ ಅಧ್ಯಾಯಕ್ಕೆ ಭಾರತೀಯ ತತ್ತ್ವಶಾಸ್ತ್ರದಲ್ಲಿ ಬಹಳ ಪ್ರಾಧಾನ್ಯವಿದೆ. `ದ್ವಿತೀಯೋ ಅದ್ವಿತೀಯಃ' ಎಂಬ ಮಾತು ಬಳಕೆಯಲ್ಲಿದೆ. ಸಾಂಖ್ಯಯೋಗ ಎಂಬ ಹೆಸರುಳ್ಳ ಈ ಅಧ್ಯಾಯದ ಉಪದೇಶಗಳು ತತ್ತ್ವವನ್ನೇ ವಿವರಿಸುವದರಿಂದ ಸಾಂಖ್ಯ ಎಂಬ ಹೆಸರೂ ಅನ್ವರ್ಥವಾಗಿದೆ. ಇದರ ೨೮ನೇ ಶ್ಲೋಕದಲ್ಲಿ ಭಗವಂತನು ``ಅವ್ಯಕ್ತಾದೀನಿ ಭೂತಾನಿ" ಎಂದಾರಂಭಿಸಿ ``ತತ್ರ ಕಾ ಪರಿದೇವನಾ" ಎಂದು ತಿಳಿಸಿರುತ್ತಾನೆ. ಪ್ರಾಣಿಗಳೆಲ್ಲವೂ ಹುಟ್ಟುವ ಮುಂಚೆ ಇರಲಿಲ್ಲ, ಮರಣಾನಂತರವೂ ಇರುವದಿಲ್ಲ, ನಡುವೆ ಮಾತ್ರ ತೋರಿ ಅನಂತರ ಮರೆಯಾಗುವವು. ಇದಕ್ಕಾಗಿ ಅಳುವದೇಕೆ? ಎಂಬಿದು ಈ ಪದ್ಯದ ಅಭಿಪ್ರಾಯ. ಈ ವಿಷಯದಲ್ಲಿ ಹಿರಿಯರು ಹೇಳುತ್ತಿದ್ದ ಒಂದು ಕಥೆ ಹೀಗಿದೆ:

ಒಬ್ಬ ಸಾಧುವು ಒಂದು ಅಡವಿಯ ನದೀ ತೀರದಲ್ಲಿ ಕುಟೀರವನ್ನು ನಿರ್ಮಿಸಿಕೊಂಡು ವಿಚಾರಮಗ್ನನಾಗಿ ಕುಳಿತಿದ್ದನು. ಒಂದು ದಿನಾ ರಾಜಕುಮಾರನು ಅಲ್ಲಿಗೆ ಬರಲು `ನೀನು ಯಾರು?' ಎಂದು ಸಾಧುವು ಕೇಳಿದನು. ಆಗ ಆತನು `ನಾನು ಕಾಶ್ಮೀರ ದೇಶದ ರಾಜನ ಮಗನು; ನನ್ನ ತಂದೆಯ ಹೆಸರು ನಿರ್ಮೋಹ ರಾಜ' ಎಂದನು. ಸಾಧುವಿಗೆ ಆಶ್ಚರ್ಯವಾಗಿ ನಿರ್ಮೋಹರಾಜ ಎಂಬುದು ಹೆಸರು ಮಾತ್ರವೊ? ವಸ್ತುಸ್ಥಿತಿಯೊ? ನಿರ್ಮೋಹನಾದವನು ರಾಜ್ಯವನ್ನು ಹೇಗೆ ಆಳಿಯಾನು? ಅವನ ಪರಿವಾರವೂ, ಪ್ರಜೆಗಳೂ ಹೇಗಿರಬಹುದು? ಎಂದು ಯೋಚಿಸುತ್ತಾ ರಾಜಕುಮಾರನಿಗೆ `ನೀನು ಇಲ್ಲಿಯೇ ಇರು, ನಾನು ನಿಮ್ಮ ದೇಶವನ್ನು ನೋಡಿಕೊಂಡು ಬರುತ್ತೇನೆ' ಎಂದು ಹೇಳಿ ಕಾಶ್ಮೀರ ದೇಶಕ್ಕೆ ಹೊರಟನು. ಅಲ್ಲಿ ಬಂದ ಮೇಲೆ ಒಂದು ಬೀದಿಯಲ್ಲಿ ಜನರು ಓಡಾಡುವಲ್ಲಿ ಬಹುದುಃಖಿತನಂತೆ ನಟಿಸುತ್ತಾ `ಅಣ್ಣಗಳಿರ, ನಿಮ್ಮ ರಾಜನ ಮಗನಂತೆ, ನಮ್ಮ ಆಶ್ರಮದ ಸಮೀಪದಲ್ಲಿ ಬೇಟೆಯಾಡಿಕೊಂಡು ಬಂದು ವಿಪರೀತ ಆಯಾಸದಿಂದ ಅಲ್ಲೇ ಬಿದ್ದು ಪ್ರಾಣವನ್ನು ಬಿಟ್ಟನು. ಈ ವರ್ತಮಾನವನ್ನು ತಿಳಿಸಲು ಬಂದೆನು' ಎಂದನು. ಈ ಮಾತನ್ನು ಕೇಳಿದ ಜನರು ನಗುತ್ತಾ `ಸ್ವಾಮಿ, ನಮ್ಮ ರಾಜಪುತ್ರನು ಮರಣ ಹೊಂದಿದನೆ?'

ಯಾವತ್ಕಾಲಂ ಭವೇತ್ಕರ್ಮ ತಾವತ್ತಿಷ್ಠನ್ತಿ ಜಂತವಃ।
ಕರ್ಮಣ್ಕ್ಷಯೇ ವಿನಶ್ಯನ್ತಿ ತತ್ರ ಕಾ ಪರಿದೇವನಾ ॥

``ಎಷ್ಟು ಕಾಲದವರೆಗೆ ಮಾಡಬೇಕಾದ ಕರ್ತವ್ಯಗಳಿರುವವೋ ಅಲ್ಲಿಯವರೆಗೆ ಪ್ರಾಣಿಗಳು ಇರುತ್ತವೆ. ಕರ್ಮಗಳು ಕ್ಷಯವಾದರೆ ಮರಣ ಹೊಂದುವವು. ಇದರಲ್ಲಿ ಆಶ್ಚರ್ಯವೇನಿದ್ದೀತು?" ಎಂದು ಬಿಟ್ಟರು. ಸಾಧುವು ಆಶ್ಚರ್ಯಯುಕ್ತನಾಗಿ ಪ್ರಜೆಗಳಿಗೆ ರಾಜನ ಮಗನು ಸತ್ತರೇನು ದುಃಖವಿದ್ದೀತು? ಎಂದು ಕೊಂಡು ಅರಮನೆಯ ಬಳಿಗೆ ಹೋಗಿ ಅಲ್ಲಿದ್ದ ಸೇವಕನೊಬ್ಬನಿಗೆ ಅದೇ ವಿಚಾರವನ್ನು ತಿಳಿಸಲು ಅವನು -

**ಪಕ್ವಾನಿ ತರುಪರ್ಣಾನಿ ಪತಂತಿ ಕ್ರಮಶೋ ಯಥಾ ।**
**ತಥೈವ ಜಂತವೋ ಕಾಲೇ ಕಾ ತತ್ರ ಪರಿದೇವನಾ ॥**

``ಮರದಲ್ಲಿ ಹಣ್ಣಾದ ಎಲೆಗಳು ಉದುರುವಂತೆ ಪ್ರಾಣಿಗಳೂ ಸಹ ಉದುರುತ್ತವೆ. ಇದಕ್ಕಾಗಿ ದುಃಖವೇಕೆ?" ಎಂದು ಬಿಟ್ಟನು. ಆಗ ಸಾಧುವು `ಈ ಸೇವಕನು ಸಂಬಳಕ್ಕಾಗಿ ಕೆಲಸ ಮಾಡುವವನು. ಆದ್ದರಿಂದ ಇವನಿಗೆ ದುಃಖವೇಕೆ ಆದೀತು? ಎಂದು ಕೊಂಡು ಅಂತಃಪುರದಲ್ಲಿ ರಾಜಕುಮಾರನನ್ನು ಸಾಕುತ್ತಾ ಜೊತೆಯಲ್ಲಿದ್ದ ಒಬ್ಬ ವೃದ್ಧ ದಾದಿಯನ್ನು ಕಂಡು ವಿಚಾರವನ್ನು ತಿಳಿಸಿದನು. ಆಕೆಯು -

ಮೃಣ್ಮಯಾನಿ ಚ ಭಾಂಡಾನಿ ಕಾಲೇ ಭಿದ್ಯನ್ತಿ ಕಾನಿಚಿತ್।
ತೈಷ್ವನ್ಯೇ ಭಿನ್ನಭಾಂಡಾನಿ ಕಾ ತತ್ರ ಪರಿದೇವನಾ ॥

``ಮಡಕೆಗಳೆಲ್ಲ ಮಣ್ಣಿನವೇ ಆಗಿದೆ. ತೊಳೆಯುವಾಗ ಕಾಲಕ್ರಮದಲ್ಲಿ ಕೆಲವು ಒಡೆದು ಹೋಗುವವು. ಅವುಗಳನ್ನು ಬಿಟ್ಟು ಉಳಿದವನ್ನೇ ಜನರು ಬಳಸುತ್ತಾರೆ. ಇದರಲ್ಲೇನಾಶ್ಚರ್ಯ?" ಎಂದಳು. ಅನಂತರ ಸಾಧುವು ರಾಜನ ಬಳಿಗೇ ಹೋಗಿ ವಿಚಾರವನ್ನು ತಿಳಿಸಿದನು. ರಾಜನು ಮುಗುಳುನಗೆಯನ್ನು ಸೂಚಿಸುತ್ತಾ -

ಋಣಾನುಬಂಧರೂಪೇಣ ಪಶುಪತ್ನಿಸುತಾಲಯಾಃ ।
ಋಣಕ್ಷಯೇ ಕ್ಷಯಂ ಯಾಂತಿ ಕಾ ತತ್ರ ಪರಿದೇವನಾ॥

``ಋಣವಿರುವವರೆಗೆ ಪಶುಗಳು, ಹೆಂಡತಿ, ಅರಮನೆ - ಇತ್ಯಾದಿಗಳು ಜೊತೆಗೂಡಿರುತ್ತಾರೆ. ಅದು ತೀರಿತೆಂದರೆ ಬಿಟ್ಟು ಹೋಗುತ್ತಾರೆ. ಇದಕ್ಕೆ ದುಃಖಪಡುವದಾದರೂ ಏಕೆ? ಎಂದು ಬಿಟ್ಟನು. ಕಟ್ಟಕಡೆಗೆ ಪುತ್ರವಾತ್ಸಲ್ಯವುಳ್ಳ ರಾಜನ ಹೆಂಡತಿಯಾದರೂ ಏನು ಹೇಳಿಯಾಳು? ಎಷ್ಟೇ ಆದರೂ ತಾಯಿಗೆ ಮಗನ ಮೇಲಿನ ವ್ಯಾಮೋಹವಿದ್ದೇ

(ಪುಟ 10ಕ್ಕೆ)

# ಸಂದರ್ಶನ: ರಬ್ಬರ್ ಉದ್ಯಮದಲ್ಲಿ ಹೆಸರು ಮಾಡಿರುವ ಕನ್ನಡಿಗ ಶ್ರೀ ಧರ್ಮರಾಜ ಕುಲಕರ್ಣಿ

• ಎನ್. ಜಿ. ನವಿಲೇಕರ್
• ಎಮ್. ಎ. ಎನ್. ಪ್ರಸಾದ್

ಶ್ರೀ ಧರ್ಮರಾಜ ಕುಲಕರ್ಣಿಯವರ ಹೆಸರು ಮುಂಬಯಿ ಕನ್ನಡಿಗರಿಗೆ ಬಹುಶಃ ಚಿರಪರಿಚಿತವಾಗಿರಲಿಕ್ಕಿಲ್ಲ. ಅವರು ಭಾರತದ ರಬ್ಬರ್ ಉದ್ಯಮಕ್ಕೆ ಕಳೆದ 45 ವರ್ಷಗಳಿಗೂ ಹೆಚ್ಚು ಕಾಲದಿಂದ ಸಲ್ಲಿಸಿರುವ ಸೇವೆಯನ್ನು ಮನ್ನಿಸಿ 1994ರಲ್ಲಿ ಅವರಿಗೆ ತುಲಸೀದಾಸ್ ಕಿಲಾಚಂದ್ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ರಬ್ಬರ್ ಉದ್ಯಮಕ್ಕೆ ಮಹತ್ತರ ಕೊಡುಗೆ ನೀಡಿದವರಿಗಾಗಿ ಮೀಸಲಾಗಿರುವ ರಾಷ್ಟ್ರಮಟ್ಟದ ಈ ಪ್ರಶಸ್ತಿಯನ್ನು ಸ್ಥಾಪಿಸಲಾದ ಮೊದಲನೇ ವರ್ಷದಲ್ಲಿಯೇ ಶ್ರೀ ಕುಲಕರ್ಣಿಯವರು ಗಳಿಸಿರುವುದು ರಬ್ಬರ್ ಉದ್ಯಮದಲ್ಲಿ ಅವರು ಏರಿರುವ ಎತ್ತರವನ್ನು ಸೂಚಿಸುತ್ತದೆ. ಇಷ್ಟೇ ಅಲ್ಲ, ಸ್ವಾತಂತ್ರ್ಯ ಹೋರಾಟ, ನಾಟಕ, ತತ್ವ ಜ್ಞಾನ, ವಿದ್ಯಾಪೀಠ ಇತ್ಯಾದಿ ಅನೇಕ ರಂಗಗಳಲ್ಲಿ ದುಡಿದಿರುವ ಶ್ರೀ ಕುಲಕರ್ಣಿಯವರನ್ನು `ನೇಸರು' ಓದುಗರಿಗೆ ಪರಿಚಯಿಸುವ ಉದ್ದೇಶದಿಂದ ದಾದರಿನ ಅವರ ಮನೆಯಲ್ಲಿ ಅವರನ್ನು ಭೇಟಿ ಮಾಡಿದೆವು.

**ನೇಸರು** : ನಿಮ್ಮ ಕೌಟುಂಬಿಕ ಹಿನ್ನೆಲೆಯಿಂದ ಪ್ರಾರಂಭಿಸೋಣ . . .

**ಕುಲಕರ್ಣಿ** : ನಮ್ಮ ಊರು ಬೆಳಗಾವಿ ಜಿಲ್ಲೆಯ ಸತ್ತಿ ಎಂಬ ಹಳ್ಳಿ, ಅಥಣಿಯ ಹತ್ತಿರ ಇದೆ. ನಾನು ಹುಟ್ಟಿದ್ದು ಆಗಸ್ಟ್ 31, 1922ರಂದು. ವಿದ್ಯಾಭ್ಯಾಸ ಸತ್ತಿ, ಬಿಜಾಪುರ ಹಾಗೂ ಮುಂಬಯಿಯಲ್ಲಿ ನಡೆಯಿತು. ಕಳೆದ ಮೂರು ತಲೆಮಾರಿನಿಂದಲೂ ನಮ್ಮ ಮನೆತನ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದೆ. ಅನೇಕರು ಜೈಲು ವಾಸ ಸಹಾ ಮಾಡಿದ್ದಾರೆ. ಇನ್ನು ನನ್ನ ತಾಯಿ ಬಿಜಾಪುರ ಜಿಲ್ಲೆ ಅಗರಖೇಡದ ಆದ್ಯ ಜಹಗೀರದಾರರ ಮನೆತನದವರು. ಆ ಮನೆತನದವರು ವಿದ್ವತ್ತಿಗೆ ಪಾಂಡಿತ್ಯಕ್ಕೆ ಹೆಸರಾದವರು. ನಮ್ಮ ತಾಯಿಯ ಪೂರ್ವಿಕರೊಬ್ಬರಿಗೆ `ದ್ರೋಣಾಚಾರ್ಯ' ಎಂಬ ಬಿರುದಿತ್ತು.

**ನೇ** : ನೀವು ನಾಟಕ ಕ್ಷೇತ್ರಕ್ಕೆ ಕಾಲಿಟ್ಟಿದ್ದು ಹೇಗೆ?

**ಕು** : ಮುಂಬಯಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋದಾಗ ಸ್ವಾತಂತ್ರ್ಯ ಚಳವಳಿಯ ಕಾವಿನಲ್ಲಿ ವಿದ್ಯಾಭ್ಯಾಸ ಅರ್ಧಕ್ಕೇ ನಿಂತಿತು. ಆಗ ಸ್ವಾತಂತ್ರ್ಯ ಚಳುವಳಿಯ ಅಂಗವಾಗಿಯೇ Indian National Theatre (INT)ಯ ಸಂಪರ್ಕ ಬಂತು. ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಆಗ ಅದರ ಅಧ್ಯಕ್ಷಿಣಿಯಾಗಿದ್ದರು. INT ಸ್ಥಾಪನೆ ಹಾಗೂ ಅದಕ್ಕೆ ರಾಷ್ಟ್ರಮಟ್ಟದ ಸ್ಥಾನ ದೊರಕಿಸಿ ಕೊಡುವುದರಲ್ಲಿ ಕಮಲಾದೇವಿಯವರ ಮಹತ್ವದ ಪಾತ್ರವಿತ್ತು. The idea of setting up INT was to generate and then activate the theatre movement in India and to act as a vehicle for national movement. It was not culture for culture's sake or art for arts' sake. ಇದು ಸುಮಾರು 1945-46ರ ಹೊತ್ತಿಗೆ. ನಾನಾಗ INTಯ General Secretaryಯಾಗಿದ್ದೆ. ಆಗ ಜವಾಹರಲಾಲ್ ನೆಹರೂರ `Discovery of India' ಆಧಾರದ ಮೇಲೆ Dance Ballet ಮಾಡಿ ನವ ದೆಹಲಿಯಲ್ಲಿ ಏಪ್ರಿಲ್ 1, 1947ರಂದು ಮೊದಲನೇ ಏಶಿಯಾ ಸಮ್ಮೇಳನದಲ್ಲಿ ಪ್ರದರ್ಶಿಸಿದೆವು. ರವಿಶಂಕರ್ ಅದರ ಸಂಗೀತ ನಿರ್ದೇಶಕರಾಗಿದ್ದರು. ಅದನ್ನು ನೋಡಿದ ಜವಾಹರಲಾಲರು `The ballet is better than the book' ಅಂದಿದ್ದರು.

The game plan of INT was to spread the theatre movement all over India. Every district must have a theatre movement centre. The government should set up a good stage with infrastructure and technical staff and rent it out to any modest person who wishes to perform. This was the way we wanted to go and establish direct links with the artistes. Whatever talent they had should be harnessed. ಅದು ಕಮಲಾದೇವಿಯ ಕನಸಾಗಿತ್ತು.

**ನೇ** : ಮುಂದೆ . . .

**ಕು** : ಅಲ್ಲಿಂದ ಸ್ವಾತಂತ್ರ್ಯ ಆಂದೋಲನಕ್ಕೆ ಸೇರಿದೆವು. National movement was already there. These were all different wings of national movement. Theatre wing, youth wing, labour wing, student wing and simultaneously a legislative wing. Rammanohar Lohia was there. Kamaladevi was in charge of theatre movement. All this was around 1945-48.

ಹೀಗೇ ಕೆಲಸ ಮಾಡಿದೆವು. ಆ ಮೇಲೆ Sardar Patel advised me ``Full time political activity requires lot of economic strength at individual level. Only those who are economically sound can manage to continue full time in politics''. ಅವರ ಆದೇಶದಂತೆ ನಾನು ಸಕ್ರಿಯ ರಾಜಕೀಯ ಚಟುವಟಿಕೆ ನಿಲ್ಲಿಸಿದೆ. ಆ ವೇಳೆ ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರು ಮುಂಬಯಿಯಲ್ಲಿದ್ದರು. ಸರದಾರ್ ಪಟೇಲರೇ ನನ್ನನ್ನು ಅವರ ಹತ್ತಿರ ಕಳುಹಿಸಿದರು. ವಿಶ್ವೇಶ್ವರಯ್ಯನವರು All India Manufacturer's Organisation (AIMO) ಸ್ಥಾಪಿಸಿದ್ದರು. `Prosperity through industry' ಇದು ಅವರ ಮಂತ್ರವಾಗಿತ್ತು. ಆ ವೇಳೆಗೆ ಅವರು ಮುಂಬಯಿಯಲ್ಲಿದ್ದು ಅವರ Memoirs (ಹಳೆಯ ನೆನಪುಗಳು) ಬರೆಯುತ್ತಿದ್ದರು. ಹಾಗೂ ಆ ಕೆಲಸದಲ್ಲಿ ಅವರಿಗೊಬ್ಬ ಸಹಾಯಕ ಬೇಕಾಗಿತ್ತು. ನಾನು ಅವರೊಂದಿಗೆ ಕೆಲಸ ಮಾಡಿದೆ. ಉಕ್ತಲೇಖನ ಮಾಡುವುದು, ಬರೆದಿದ್ದನ್ನು ಅವರಿಗೆ ತೋರಿಸಿ ಪರಿಷ್ಕರಿಸುವುದು ಇತ್ಯಾದಿ ಕೆಲಸ ಸುಮಾರು ಆರು ತಿಂಗಳು ಮಾಡಿದೆ. ಆ ಕೆಲಸ ಮಾಡಿ ಮುಗಿದ ಮೇಲೆ



ಮಾಜಿ ಪ್ರಧಾನ ಮಂತ್ರಿ ಶ್ರೀ ಚಂದ್ರಶೇಖರ್‌ರವರಿಂದ ಶ್ರೀ ಕುಲಕರ್ಣಿಯವರಿಗೆ ಪ್ರಶಸ್ತಿ ಪ್ರದಾನ.

ಅವರು ನನ್ನನ್ನು AIMOದ Assistant Secretary in charge of regional bodies in Gujarat, Hyderabad, Saurashtra etc. ಎಂದು ನೇಮಿಸಿದರು. ಅದೇ ಹುದ್ದೆಯಲ್ಲಿ ಸುಮಾರು ಎರಡು ವರ್ಷ ಕೆಲಸ ಮಾಡಿದೆ. ಆ ಹುದ್ದೆಯಲ್ಲಿ ಹೆಚ್ಚೇನು ಭವಿಷ್ಯವಿಲ್ಲದಿದ್ದರಿಂದ ಅದನ್ನು ಬಿಟ್ಟೆ. Then I joined All India Rubber Industries Association (AIRIA) mainly because of Lalit Mohan Jamnadas who was the founder of AIRIA with the objective of protecting the interests of Indian Rubber Industry against foreign rubber companies operating here. Sri Jamnadas was my colleague in politics, youth movement and theatre movement earlier. AIRIAಯ ಕಾರ್ಯದರ್ಶಿ ಎಂದು ಸೇರಿದೆ. Since then I am continuously and actively associated with rubber industry in general, AIRIA in particular, till now.

From 1951 to 1958 I was the secretary. ಆ ಮೇಲೆ ಅದನ್ನು ಬಿಟ್ಟು ನನ್ನದೇ ಸ್ವಂತ ರಬ್ಬರ್ ಕೈಗಾರಿಕೆ ಸ್ಥಾಪಿಸಿದೆ. 1961ರಲ್ಲಿ ಪುನಃ AIRIAಯ ಪ್ರಧಾನ ಕಾರ್ಯದರ್ಶಿ ಎಂದು ಆಯ್ಕೆಯಾಗಿ ವಾಪಸು ಬಂದೆ. But later on due to difference of opinion with managing committee members, I quit that post and started 'Rubber News'. Later on, I stopped my rubber factory also and devoted full time to 'Rubber News'. However, I am still active in AIRIA as managing committee member.

ಮೊದಲೇ ಹೇಳಿದಂತೆ, ಸ್ವಾತಂತ್ರ್ಯ ಕಾಲದಲ್ಲಿ ಭಾರತದಲ್ಲಿ ಸಕ್ರಿಯವಾಗಿದ್ದ ಪರದೇಶೀ ರಬ್ಬರ್ ಕಂಪನಿಗಳ ವಿರುದ್ಧ ಭಾರತೀಯ ರಬ್ಬರ್ ಉದ್ಯಮದ ಹಿತಾಸಕ್ತಿ ಕಾಪಾಡುವುದು ಹಾಗೂ ಅದು ತನ್ನ ಕಾಲ ಮೇಲೆ ತಾನೇ ನಿಲ್ಲುವಂತೆ ಮಾಡುವುದು ಇವು AIRIAಯ ಸ್ಥಾಪನೆಯ ಉದ್ದೇಶವಾಗಿತ್ತು, ಬಹಳ ಮಟ್ಟಿಗೆ, ಈ ಉದ್ದೇಶ ಈಡೇರಿದೆ.

Also the approach was to have a overall developmental infrastructure for rubber industry including raw materials, technical staff of vrious levels, research and development etc. so that all aspects of rubber industry are taken care of. Because of our efforts, our students need not go to USA, UK or Singapore for studying rubber technology. Now many Indian Universities like Cochin, Madras, Jadhavpur, IIT Kharagpur etc. offer courses in Rubber Technology. With a view to have our own R&D effort in rubber, Indian Rubber Manufacturer's Research Association (IRMRA) was established in Thane in 1961 as a co-operative venture between Rubber Manufacturers and Govt. of India with 50% stake from each.


ಶ್ರೀ ಹಾಗೂ ಶ್ರೀಮತಿ ಕುಲಕರ್ಣಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ.

Now that we are almost completely self sufficient in our resources, technology, R&D etc., we want to utilise our expertise to become a leader in the whole of South East Asia and help them to develop their own rubber industry just the way we have done.

ನೇ : ಸದ್ಯದ Economic Liberalisation ಗೆ ರಬ್ಬರ್ ಉದ್ಯಮದ ಪ್ರತಿಕ್ರಿಯೆ ಏನು?

ಕು : In order to improve rubber industry in India further we need massive investments which can come from advanced countries. I have taken up and highlighted the strong areas of Indian rubber industry, areas which need investment, huge untapped Indian market etc. at International fora. India is like a hungry elephant in contrast to the advance countries faced with the prospect of feeding the overfed goat again and again.

Now many multinational companies like Shell, Dupont, Exxon & Monsanto are showing interest in investing in India.

ನೇ : What is your vision of Rubber Industry of India in future?

ಕು : We should become a source of most advanced technical facility in the whole of South East Asia and we should be able to offer the best in the world. It is in terms of state-of-the-art technical training and R&D efforts that India should lead other countries of South East Asia. Some effort has been made to invite the best of USA Universities to design and set up


ಶ್ರೀ ಕುಲಕರ್ಣಿ.

courses relating to rubber industry in Indian Universities or on an independent basis.

**ನೇ** : ತುಲಸೀದಾಸ್ ಪಿಲಾಚಂದ್ ಪ್ರಶಸ್ತಿಯ ಬಗ್ಗೆ ಹೇಳುತ್ತೀರಾ?

**ಕು** : Synthetic and Chemicals Ltd.,ನವರು ತಮ್ಮ ಕಂಪನಿಯ ಸ್ಥಾಪಕ Chairman ಶ್ರೀ ತುಲಸೀದಾಸ್ ಪಿಲಾಚಂದ್ ಅವರ ನೆನಪಿನಲ್ಲಿ ಈ ಪ್ರಶಸ್ತಿಯನ್ನು ಕೊಡ ಮಾಡಿದ್ದಾರೆ. 1994ರಿಂದ ಪ್ರತಿ ಎರಡು ವರ್ಷಕ್ಕೊಮ್ಮೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿ ವಿಜೇತರನ್ನು ಆಯ್ಕೆ ಮಾಡಲು ದೆಹಲಿಯ ಲೆಫ್ಟಿನೆಂಟ್ ಗವರ್ನರ್ P. K. ದವೆಯವರ ನೇತೃತ್ವದಲ್ಲಿ ಉಚ್ಚಮಟ್ಟದ ಸಮಿತಿಯನ್ನು ನೇಮಿಸಲಾಗಿದೆ. ಪ್ರಶಸ್ತಿ 1,51,000/- ರೂ. ನಗದು, ಬಂಗಾರದ ಪದಕ ಹಾಗೂ ಮಾನಪತ್ರವನ್ನು ಒಳಗೊಂಡಿರುತ್ತದೆ. ಪ್ರಶಸ್ತಿ ವಿಜೇತರು ಒಂದು ದತ್ತಿ ಉಪನ್ಯಾಸವನ್ನು ನೀಡಬೇಕಾಗುತ್ತದೆ.

It is to be given to an individual who is an Indian National:

i) In recognition of his/her outstanding contribution and development of the Indian Rubber Industry.

ii) Who has tried to provide the necessary spring board from which the rubber industry in India has planed its perspective.

iii) Who has distinguished himself in promoting the cause of the Indian Rubber Industry and National and International levels by virtue of which development needs and investment opportunities of the industry have received encouraging response.

(ಈ ಮೇಲಿನ ಭಾಗವನ್ನು ಪ್ರಶಸ್ತಿಯ Brochureನಿಂದ ಉದ್ಧರಿಸಲಾಗಿದೆ).

ನವ ದೆಹಲಿಯ ಇಂಪೀರಿಯಲ್ ಹೋಟೆಲಿನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ (16ನೇ ಜನವರಿ 1995), ಮಾಜಿ ಪ್ರಧಾನ ಮಂತ್ರಿ ಶ್ರೀ ಚಂದ್ರಶೇಖರ್ ಅವರ ಅಮೃತ ಹಸ್ತದಿಂದ ಪ್ರಶಸ್ತಿಯನ್ನು ನೀಡಲಾಯಿತು.

**ನೇ** : ನೀವು ಪ್ರಾರಂಭಿಸಿದ ಕನ್ನಡ ಪತ್ರಿಕೆಯ ಬಗ್ಗೆ . . .

**ಕು** : ಹೌದು. 1947ರಲ್ಲಿ ಮುಂಬಯಿಯಲ್ಲಿಯೇ ಮೊದಲ ಬಾರಿಗೆ `ಜಾಗೃತಿ' ಎಂಬ ಕನ್ನಡ ಪತ್ರಿಕೆಯನ್ನು ಸ್ಥಾಪಿಸಿದೆವು. ಕಮಲಾದೇವಿ ಚಟ್ಟೋಪಾಧ್ಯಾಯ, ಟಿ. ಸಿದ್ದಲಿಂಗಯ್ಯ, ಶ್ರೀನಿವಾಸ ಮಲ್ಯ ಇವರೆಲ್ಲಾ ಈ ಪತ್ರಿಕೆ ಹುಟ್ಟಿ ನಡೆಯುವುದಕ್ಕೆ ಕಾರಣಕರ್ತರಾಗಿದ್ದರು. It was started mainly as a political vehicle to educate and propagate the socialistic ideals. I was the Managing Director. ಕೊಲಾಬಾದ, Ruby Mansion ಕಟ್ಟಡದಲ್ಲಿ ಈ ಪತ್ರಿಕೆ ಆಚ್ಚಾಗುತ್ತಿತ್ತು.

**ನೇ** : ನಿಮ್ಮ ಇತರ Interests ಏನು?

**ಕು** : Development of rural economy by the locals themselves. Irrigating the dry lands and thus increasing the yield. If the Govt. cannot provide the funds, individual enterprise should try to do this. As an experiment we have started one such project of irrigating around 200 acres of land in Satti village by bringing water in pipes from Krishna River 11 km. away last year. It is getting completed now.

**ನೇ** : Who were your role models?

**ಕು** : Acharya Narendra Dev. Ideologically he was closest to me and he was a very fine gentleman. And then there was S. K. Patil. Kamaladevi Chattopadhyaya was like a foster-mother to me and was a great source of strength.

●

---

## ಕಾ ತತ್ರ ಪರಿದೇವನಾ

*(ಪುಟ 7ರಿಂದ)*

ಇರುವದಲ್ಲವೇ? ಎಂದು ಯೋಚಿಸಿ, ರಾಣಿಗೆ ಈ ವಿಷಯವನ್ನು ತಿಳಿಸಿದಾಗ ಆಕೆಯು ಕೂಡಾ ಹೀಗೆಂದಳು-

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಪರಸ್ಪರಾ ।
ಸಮೇತ್ಯ ಚ ವ್ಯಪೇಯಾತಾಂ ತತ್ರ ಕಾ ಪರಿದೇವನಾ ॥

ನದೀ ಪ್ರವಾಹದಲ್ಲಿ ತೇಲಿ ಬಂದ ಎರಡು ಕಟ್ಟಿಗೆಗಳು ಕ್ಷಣಕಾಲ ಒಂದುಗೂಡಿ ಅನಂತರ ಬೇರೆ ಬೇರೆಯಾಗುವಂತೆ ಈ ಭೌತಿಕಸಮಾಗಮವು ಕ್ಷಣಿಕವೇ ಆಗಿರುವದು. ಇದಕ್ಕೆ ದುಃಖವೇಕೆ? ಎಂದಳು. ಕೊನೆಗೂ ಬಿಡದೆ ಸಾಧುವು ರಾಜಕುಮಾರನ ಹೆಂಡತಿಗೂ ತಿಳಿಸಲಾಗಿ ಆಕೆಯು `ಮಹಾತ್ಮರೆ, ರಾತ್ರಿ ವೇಳೆಯಲ್ಲಿ, ಒಂದು ಮರದ ಮೇಲೆ ಕೂಡಿದ ಪಕ್ಕಿಗಳು ಬೆಳಗಾಗುತ್ತಲೆ ಹಾರಿ ಹೋಗುವಂತೆಯೇ ಈ ಸಂಸಾರವಲ್ಲವೇ? ಇದಕ್ಕೆ ದುಃಖವೇಕೆ?' ಎಂದಳು. ಆಗ ಸಾಧುವು `ನಿಜವಾಗಿ ಇದು ನಿರ್ಮೋಹನ ರಾಜ್ಯವೇ ಸರಿ' ಎಂದು ಹಿಂದಿರುಗಿ ರಾಜಕುಮಾರನಿಗೆ ಎಲ್ಲಾ ವಿಷಯಗಳನ್ನೂ ತಿಳಿಸಿ ತಾನೂ ನಿರ್ಮೋಹನಾದನಂತೆ. ಇದನ್ನು ನಾವು ಮನಗಾಣಬೇಕಾಗಿದೆ.

- (ಕೆ. ಎಸ್. ನಾಗರಾಜ್, ಕಣಜನಹಳ್ಳಿ, ಪಿರಿಯಾಪುರ ತಾ.)

(ಆಧ್ಯಾತ್ಮ ಪ್ರಕಾಶದ ಕೃಪೆಯಿಂದ

---

ಹರಟೆ:

## ಬೇಸ್ತು

● **ನಾಡಿಗರ್ ಗೋವಿಂದ ರಾವ್**

ಆ ದಿನ ಬೆಳಗಿನ ಕ್ಲಾಸು. ಎದ್ದಿದ್ದು ಯಥಾಪ್ರಕಾರ ಹೊತ್ತು. ಎದ್ದವನೇ ಹಲ್ಲು ಪುಡಿಯನ್ನು ಹಾಗೆಯೆ ಮುಕ್ಕಿ ಮುಸುಡಿಯನ್ನು ಗಲಿ ಬರಸಿಕೊಂಡು ಒಂದೇ ಉಸುರಿಗೆ ಕರಿಯ ಕಾಫಿಯನ್ನು ಹೀರಿದೆ. ಮೊದಲನೆ ಪೀರಿಯಡ್. ಆದ್ದರಿಂದ ನಾಲ್ಕು ಚೊಂಬು ನೀರನ್ನು ಮೈಗೆ ಹುಯ್ದುಕೊಂಡು, ಸ್ನಾನದ ಶಾಸ್ತ್ರ ಮುಗಿಸಿದ್ದಾಯಿತು. ಕಾಲೇಜು ಲೆಕ್ಚರರ್ ಆಗಿದ್ದೂ ಆ ಕಾಲದಲ್ಲಿ ಪಾಠ ಮಾಡಲು ಷರ್ಟು, ಪೈಜಾಮ ಹಾಕಿಕೊಂಡು ಹೋಗುತ್ತಿದ್ದುದು ನನ್ನ ಪದ್ಧತಿ. ಅವಸರ ಅವಸರವಾಗಿ ಬಿಸಿಲು ಮಚ್ಚಿನ ಮೇಲೆ ಒಣಗಿದ್ದ ಪೈಜಾಮ ಹಾಕಿ ಕೊಂಡು ಕಾಲೇಜಿಗೆ ಹೊರಟೆ.

ಎಲ್ಲರ ದೃಷ್ಟಿಗಳು ನನ್ನ ಕಡೆಗೇ ಇದ್ದವು. ಹುಡುಗರು ಎಂದಿಗಿಂತ ಹೆಚ್ಚಾಗಿ ನಕ್ಕರು. ನನ್ನ ಸಣ್ಣ ಪುಟ್ಟ ತಮಾಷೆಗೂ ಎಲ್ಲರೂ ವಿಪರೀತವಾಗಿ ನಕ್ಕರು. ಹೆಣ್ಣು ಹುಡುಗಿಯರು ಪುಸ್ತಕದಿಂದ ಮುಖ ಮುಚ್ಚಿ ಕೊಂಡು, ಬಾಯಿಯಲ್ಲಿ ಕರ್ಚೀಫ್ ತುರುಕಿ ಕೊಂಡು ನಗುವನ್ನು ನಿರೋಧಿಸುತ್ತಿದ್ದಂತೆ ಕಾಣಿಸಿತು. ಅವರ ಕಣ್ಣಿನಲ್ಲಿ ತುಂಟ ನಗೆ ತುಳುಕುತ್ತಿತ್ತು. ಲೆಕ್ಚರರ್ಸ್ ರೂಮಿನಲ್ಲಿ ಕೆಲವರು ಫ್ಯಾಷನ್ ಬಗ್ಗೆ ಮಾತನಾಡ ತೊಡಗಿದರು.

ಮನೆಗೆ ಬಂದಾಗ ಪಕ್ಕದ ಮನೆಯ ಪಂಜಾಬಿ ನನ್ನನ್ನು ನೋಡಿ ಅವಕ್ಕಾದ. ಅವನು ತುಂಬಾ ಒಳ್ಳೆಯವನು. ಅವನೂ ಅವನ ಹೆಂಡತಿ, ಮಗಳು ನಿರಾಶ್ರಿತರಾಗಿ ನಮ್ಮೂರಿಗೆ ಬಂದಿದ್ದರು. ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಅವನಿಗೆ ಕೆಲಸ. ಅಂತಸ್ತುಗಳಿಲ್ಲದ ಐದು ಮನೆಗಳ ಸಾಲಿನಲ್ಲಿ, ಮಧ್ಯ ನನ್ನ ಅಚ್ಚುಕಟ್ಟು ಎನ್ನಿಸಿಕೊಳ್ಳುವ ಇಕ್ಕಟ್ಟಾದ ಬಾಡಿಗೆ ಮನೆ. ಪಕ್ಕದ್ದು ಪಂಜಾಬಿಯದು. ಐದು ಮನೆಗಳ ಮೇಲೆ ಒಂದೇ ಉದ್ದಕ್ಕೂ ಬಿಸಿಲು ಮಚ್ಚು (Terrace). ನನ್ನನ್ನು ನೋಡಿದವನೆ ``ಏ ಕ್ಯಾ?'' ಎಂದು (ಹೌ ಹಾರಿದ) ಹೌ ಹಾರಿದ. ನಾನು ಏನು ಸಮಾಚಾರವೆಂದು ನನ್ನ ಹರಕು ಮುರುಕು ಹಿಂದಿಯಲ್ಲಿ ಕೇಳಿದೆ. ತನ್ನ ಮಗಳ ಪೈಜಾಮವನ್ನು ನಾನು ಹಾಕಿ ಕೊಂಡಿರುವುದಾಗಿ ತನ್ನ ಇಂಗ್ಲಿಷ್‌ನಲ್ಲಿ ಹೇಳಿದ. ಅಯ್ಯೊ ಬೇಸ್ತು ಬಿದ್ದೆ ಎಂದು ತಿಂಗಳ ರೇಷನ್ ಕಳೆದು ಕೊಂಡವನಷ್ಟು ಪೆಚ್ಚಾದೆ. ಹೆಂಡತಿಯನ್ನು ``ಪಡೋಸಿ''ಯ ಮೈ ಮೇಲೆ ಅವಳ ಮಗಳ ಕಪಡ ಇದೆ ಎಂದು ತಿಳಿಸುವುದಕ್ಕಾಗಿ ಕೂಗಿ ಕರೆದ. ಮಗಳ ಜರಿಯ ನೆರಿನೆರಿಗೆಯ ದೊಗಲ್ಲೊಣ್ಣ ನನಗೆ ಗಂಟು ಬಿದ್ದಿದೆ. ನನ್ನ ಪೈಜಾಮ ಬಿಸಿಲು ಮಚ್ಚಿನ ಮೇಲೆ ಹಾಗೆಯೆ ಮಲಗಿದೆ. ಅಂದಿನಿಂದ ನನಗನಿಸಿತು: ``ಕಪಡ'' ಎಂದರೆ ``ಕಪಟ''ವೇ ಆಗುತ್ತದೆ.

ಜನ ನನ್ನನ್ನು ನೋಡಿ ನಗಲಿಲ್ಲ. ನಾನು ಹಾಕಿ ಕೊಂಡ ಪೈಜಾಮ ನೋಡಿ ನಕ್ಕರು. ಇದಕ್ಕೇಕೆ ಇಷ್ಟು ಪರಿತಾಪ ಎಂದು ಸುಳ್ಳು ಸಮಾಧಾನ ಮಾಡಿ ಕೊಂಡೆ. ಪಂಜಾಬಿ ಹುಡುಗಿಯ ಆ ಪೈಜಾಮ ನೋಡಿದಾಗಲೆಲ್ಲ ನನಗೂ ಕೊರಗು; ನಗು. ಹೆಂಗಸರು ಗಂಡಸರ ಉಡುಪನ್ನು ಹಾಕಿ ಕೊಂಡರೆ ಆಗುವ ಅನರ್ಥಕ್ಕೆ ಇದೊಂದು ಸಾಮತಿ.

# ಬೇಂದ್ರೆ ಕಂಡ ಶ್ರಾವಣ

● ಸುಮ ದ್ವಾರಕಾನಾಥ್

ನಿಸರ್ಗ ಮೂಲದಿಂದ ಒದಗುವ ಸೌಂದರ್ಯಾನುಭವವು ನವೋದಯದ ಮುಖ್ಯ ಪ್ರೇರಕ ನೆಲೆಗಳಲ್ಲಿ ಒಂದಾಗಿತ್ತೆಂಬುದು ತೆರೆದಿಟ್ಟ ಸಂಗತಿ.

ಕನ್ನಡ ಕಾವ್ಯ ಲೋಕದಲ್ಲಿ ಅವಿಸ್ಮರಣೀಯರಾದ ಡಾ। ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರ ಕೊಡುಗೆ ಅತ್ಯಂತ ಅಪೂರ್ವವಾದುದು. ಅವರ ಸಾಹಿತ್ಯ (ವಿಪುಲ)ದ ವಿವರಣೆಗೆ ಹೋಗದೆ, ಅವರು ಕಂಡ ಶ್ರಾವಣದ ವೈಭವವನ್ನು ಮಾತ್ರ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಕಾಳಿದಾಸ, ಪಂಪನಂಥವರು ವಸಂತದ ಕವಿಯಾಗಿದ್ದರೆ ಬೇಂದ್ರೆ ಶ್ರಾವಣದ ಕವಿ. ಋತುಗತಿಯ ಪ್ರಮುಖ ಅವಸ್ಥೆಗಳಲ್ಲೊಂದಾದ ಶ್ರಾವಣ, ಬೇಂದ್ರೆ ಕಾವ್ಯಗತಿಯ ಒಂದು ನಿರ್ಣಾಯಕ ಅಂಶ. ಅನೇಕ ಬೇರೆ ಅನುಭವಗಳಿಗಿಂತ ಹೆಚ್ಚು ಆಪ್ತವೂ ದೃಶ್ಯಾತ್ಮಕವೂ ಆದ ಈ ಅನುಭವ, ಅನುಭಾವದ ನೆಲೆಯನ್ನು ಏರುವುದು ಬೇಂದ್ರೆ ಕಾವ್ಯದಲ್ಲಿ ಎದ್ದು ಕಾಣುವ ಅಂಶವಾಗಿದೆ. ಕಾವ್ಯ ಮಹತ್ತುಳ್ಳದ್ದಾಗಿದೆ.

ವೈಶಿಷ್ಟ್ಯ: ಶ್ರವಣೇಂದ್ರಿಯ ಅಂದರೆ ಕಿವಿ. ಶ್ರಾವಣ, ನಿಸರ್ಗ ರಮಣೀಯ ಮಾಸ. ಶ್ರಾವಣದ ಶ್ರುತಿಯನ್ನು ಶ್ರವಣ ಮಾಡುವುದು ಬೇಂದ್ರೆಯವರ ರೂಢಿ. (ಯುಗಾದಿಯ ಪಂಚಾಂಗ ಶ್ರವಣದಂತೆ) ಬೇಂದ್ರೆಯವರು ಹುಟ್ಟಿದ ಚಂದ್ರ ನಕ್ಷತ್ರ - ಮಘಾ, ಸೂರ್ಯ ನಕ್ಷತ್ರ - ಶ್ರವಣ.

ವರ್ಷ ವರ್ಷಕ್ಕೆ ಹೊಸತನ ತರುವುದು ವರ್ಷಕಾಲ ಎಂದು ಶ್ರಾವಣದ ಹೊಸತನವನ್ನು ಒಪ್ಪುವ, ಅದಕ್ಕಾಗಿ ಕಾಯುವ, ಕವಿ ಬೇಂದ್ರೆಯ ಶ್ರಾವಣ ಪ್ರಿಯತೆಗೆ ಕಾರಣವನ್ನು ಕೊಡುವ ಯತ್ನ ಇಲ್ಲಿ ನಡೆದಿದೆ.

ಶ್ರಾವಣ ಮಾಸದ ಮಳೆ, ಬಿಸಿಲು, ಜೀವನ ತತ್ವವನ್ನೇ ಬಿಂಬಿಸುವ, ಜೀವನ ಚಕ್ರವನ್ನು ತಿರುಗಿಸುತ್ತಲಿದೆ ಎಂಬ ನಂಬಿಕೆ ಕವಿಗಿದೆ. ಹೀಗಾಗಿ ಬೇಂದ್ರೆಯವರ ತಾತ್ವಿಕ ಹಿನ್ನೆಲೆ, ನಿಸರ್ಗ ಪ್ರಿಯರಿಗೆ ಪ್ರಿಯವಾಗುವ ಶ್ರಾವಣದ ಪ್ರಾಕೃತಿಕ ಪರಿಸರ, ಈ ಮಾಸದಲ್ಲಿ ನಡೆದ ಕವಿಯ ವೈಯ್ಯಕ್ತಿಕ, ಕೌಟುಂಬಿಕ ಘಟನೆಗಳು, ಪೌರಾಣಿಕ, ಚಾರಿತ್ರಿಕ, ಸಮುದಾಯಕ ಸಂಗತಿಗಳು ಇವೆಲ್ಲ ಶ್ರಾವಣದ ನಿರಂತರವಾದ ಆಂತರಿಕ ಸೆಳೆತದ ಹಿಂದಿದೆ. ಅಂತೆಯೇ ಶ್ರಾವಣ ಗೀತಗಳು ಸರಳವಾದ ಋತು ಗೀತಗಳಲ್ಲ. ಅವರ ಅನುಭವ ಜಗತ್ತಿನಲ್ಲಿ ಹೀಗೆ ವಿಶಿಷ್ಟ ಸ್ಥಾನ ಪಡೆದ ಶ್ರಾವಣ ಅನುಭಾವದ ಒಂದು ನಿಚ್ಚಣಿಕೆಯಾಗಿ ಮತ್ತೆ ಮತ್ತೆ ಕಾವ್ಯದಲ್ಲಿ ಕಾಣಿಸಿಕೊಂಡಿದೆ ಎಂದು ಡಾ। ವಿಜಯಾ ದಬ್ಬೆಯವರು ಅಭಿಪ್ರಾಯ ಪಡುತ್ತಾರೆ. ಕವನದ ಶೀರ್ಷಿಕೆಯಲ್ಲಿ ಕೂಡ ಪರ್ಯಾಯ ಶಬ್ದಗಳನ್ನು ಕಾಣಿಸದೆ ಶ್ರಾವಣ ಎಂಬುದನ್ನೇ ವಿಶೇಷಣದೊಂದಿಗೆ ಅಥವಾ ಹಾಗೇ ಬಳಸಿದ್ದಾರೆ.

ಅನೇಕ ಸಿಹಿ-ಕಹಿ ನೆನಪುಗಳನ್ನೊಳಗೊಂಡ ಶ್ರಾವಣ ಅವರಿಗೆ ನಿತ್ಯ ನೂತನವಾಗಿ ಕಾಣುತ್ತದೆ. ಅವರ ತಾಯಿ, ಗೆಳೆಯರು, ತಂದೆ, ಪತ್ನಿ ಇವರೆಲ್ಲರನ್ನೂ ಶ್ರಾವಣದಲ್ಲಿಯೇ ಕಳೆದು ಕೊಂಡರೂ, ವಾಮನ, ಮಂಗಲ, ಶ್ರೀ ಕೃಷ್ಣನ ಹುಟ್ಟಿನ ಮಾಸ ಶ್ರಾವಣವೆಂದು ಹಿಗ್ಗುತ್ತಾರೆ. ಜೊತೆಗೆ ಅರವಿಂದರ ಹುಟ್ಟಿದ್ದು, ಸ್ವಾತಂತ್ರ್ಯದ ಬಂದ ದಿವಸವೂ ಶ್ರಾವಣದಲ್ಲಿಯೇ ಎಂದು ಅವರು ಮನಸ್ಸು ಕುಣಿಯುತ್ತದೆ. ಹೀಗೆ ಶ್ರಾವಣ ವಿಧ ವಿಧವಾಗಿ ಅನೇಕ ಸುಖ ದುಃಖಗಳ ಎಳೆಯನ್ನು ನೇಯ್ದಿದೆ. ಇಲ್ಲೆಲ್ಲ ಮರಳಿ ಬರುವ, ಹುಟ್ಟಿ ಸಾಯುವ, ಸತ್ತು ಮತ್ತೆ ಹುಟ್ಟುವ ವ್ಯಾಪಾರಗಳಾಗಿವೆ.

ಸಖೀ ಗೀತದ ಶ್ರಾವಣ ವೈಭವದಿಂದ ಪ್ರಾರಂಭಿಸಿ, `ಶ್ರಾವಣದ ಹಗಲು', `ಶ್ರಾವಣ', `ಬಂದಿಕಾರ ಶ್ರಾವಣ', `ಪ್ರತಿ ವರ್ಷದಂತೆ ಬಂತು ಶ್ರಾವಣ', `ಮತ್ತ ಶ್ರಾವಣ', `ಮತ್ತೆ ಶ್ರಾವಣ ಬಂದಾ', `ಮತ್ತೆ ಮತ್ತೆ ಶ್ರಾವಣ ಬಂತು' ಎಂಬ ಸಂಕಲನದವರೆಗೆ ಬೇಂದ್ರೆಯವರ ಶ್ರಾವಣ ಪ್ರೀತಿಯ ಬಳ್ಳಿ ಹಬ್ಬಿದೆ.

`ಶ್ರಾವಣದ ವೈಭವ' ಅವರ ಕಿರ ಸರಳವಾದ ಕವಿತೆಗಳಲ್ಲೊಂದಾಗಿದೆ. ``ಬರಡು ನೆಲದ ಸಿಂಗಾರ ಕವಿಗೆ ಬಸಿರೆ ನೆಲಕೆ ಹೂ ಮುಡಿಸಲೆಂದು ಬಂದ ಸಂಭ್ರಮ"ದಂತೆ ಕಾಣುತ್ತದೆ. ನೆಲ ಬೇಂದ್ರೆಯ ``ಉಸಿರಿದ್ದೊಡಲು"* ``ಅಕ್ಷರದೀ ಬ್ರಹ್ಮ ಕೃತ್ಯ ನಿತ್ಯದ ಈ ನೃತ್ಯ ಚಿತ್ರದಲ್ಲಿ ಚಿತ್ರಿಸುತಿದೆ ಮರ್ತ್ಯವಹುದ ಮರ್ತ್ಯ".

``ಪ್ರತಿ ವರ್ಷದಂತೆ ಬಂತು ಶ್ರಾವಣ" (ಅರಳು-ಮರಳು) ಈ ಕವನದಲ್ಲಿ ನೆಲವನ್ನು ಪ್ರೀತಿಯಿಂದ ತಬ್ಬಿದ ಹಸಿರು ಹಳದಿ ಹೂಗಳ ಸಾಂಕೇತಿಕತೆಯಲ್ಲಿ ಪ್ರೇಮ ಹೊಸ ಹುಟ್ಟುಗಳ ತಾತ್ವಿಕತೆಯನ್ನಲ್ಲದೆ, ಮನುಜ ಕ್ರಮ ಸೃಷ್ಟಿ ಕ್ರಮಗಳ ಏಕ ರೂಪತೆಯ ದರ್ಶನವನ್ನು ಕವಿ ಅನುಭವಿಸುತ್ತಾನೆ.

ಈ ಹೊಸ ಹುಟ್ಟಿಗೆಲ್ಲ ಹೂವಿನಷ್ಟೇ ಪ್ರಭಾವಿಯಾದ ಇನ್ನೊಂದು ಪ್ರತೀಕ ಚಿಟ್ಟೆ. ಕುಡಿಯು ಅರಳಿ ಹೂವಾದಂತೆ, ಹುಳ ರೆಕ್ಕೆ ಪಡೆದು ಚಿಟ್ಟೆಯಾಗುವ ಈ ಹೊಸ ಹುಟ್ಟಿನ ಸಂಭಾವ್ಯತೆಗಳು ಕವಿಗೆ ಕುತೂಹಲದ ವಿಷಯವಾಗುತ್ತದೆ. ಚಿಟ್ಟೆಗೆ ದೊರೆಯುವ ಮುಕ್ತಿ, ಹಿಗ್ಗು ಅವರು ನಂಬಿದ ಮೌಲ್ಯಗಳೇ ಆದ್ದರಿಂದ ಚಿಟ್ಟೆಯ ಮಹತ್ವ ಇನ್ನೂ ಹೆಚ್ಚುತ್ತದೆ. ಈಗ ಕವಿಯ ಜಗತ್ತೆಲ್ಲ ಹೂ, ಚಿಟ್ಟೆಮಯ, ಒಂದನ್ನೊಂದು ತಬ್ಬಿ ಏಕ ಜೀವವಾದ ಹೂ-ಚಿಟ್ಟೆಗಳಲ್ಲಿ ಭೇದ ಕೂಡ ಮಾಯವಾಗಿ ಪ್ರೇಮದ ಅದ್ವೈತ ದರ್ಶನವೊಂದೇ ಅವನ ಅನುಭವವಾಗಿ ಉಳಿಯುತ್ತದೆ. ಬೇರಾಗಿ ಬೆರೆಯುವುದೇ ಕಾರ್ಯವೆನ್ನುವ ಶ್ರಾವಣದ ಸಂದೇಶ ಮೂರ್ತ ರೂಪವನ್ನು ತಳೆದು ಅವರ ಮನಸ್ಸನ್ನು ತುಂಬುತ್ತದೆ.

``ಇಂದ್ರಜಾಲದಿಂದ ಬಂದ ಸುಂದರಿಯರು" (ರೂಪಕ) ಮೊದಲಾದ ಅನೇಕ ಉಪಮೆ, ಉತ್ಪ್ರೇಕ್ಷೆಗಳು ಇಲ್ಲಿವೆ. ``ಹೂವ ಹಡಲಿಗೆಯನೆ ಹೊತ್ತ ಭೂಮಿ ತಾಯಿ ಜೋಗತಿ" ಎಂಬ ಸಜೀವ ಪ್ರತಿಮೆ ಕಾಣುತ್ತದೆ. ಜೋಗತಿಯ ಉನ್ಮಾದದೊಂದಿಗೆ ಶ್ರಾವಣದ ಉನ್ಮಾದವನ್ನು ಹೋಲಿಸಿದ್ದಾರೆ.

ಶ್ರಾವಣದ ಹಸಿರು, ಬೆಳೆಗೆ ಸಂಜೀವಿನಿ ಆಗಿದ್ದಂತೆ, ಹೃದಯಕ್ಕೂ ಸಂಜೀವಿನಿಯಾಗಿದೆ ಎನ್ನುವುದನ್ನು ಕವಿ ಬಲ್ಲ.

ಶ್ರಾವಣ ತರುವ ಹೊಸ ಹುಟ್ಟು ಪ್ರಕೃತಿಯ, ಮನುಷ್ಯನ ವೈಭವ ದರ್ಶನಕ್ಕೆ ಕಾರಣವಾಗಿದೆ ಎನ್ನುವುದು ಮೊದಲಿನ ಕವಿತೆಯ ಕಾಣ್ಕೆಯಾದರೆ ಮರಣಕ್ಕೆ ಆಹ್ವಾನ ನೀಡಿ ಹೆಣದಲ್ಲಿಯೂ ಪ್ರಾಣವನ್ನು ಪ್ರತಿಷ್ಠಾಪನೆ ಮಾಡಬಲ್ಲ ಶ್ರಾವಣದ ಸಾಮರ್ಥ್ಯವು ವಿಜೃಂಭಣೆ ಈ ಕವಿತೆಯಲ್ಲಿದೆ. (`ಗಾಳಿ ಬೀಸಿ ಹಾಸಿ ಹೋಗಿ, ಘಾಸಿ ಮಾಡ ಬಂದರೂ') ಬೇಂದ್ರೆಯವರ ಈ ಕವಿತೆ ಓದುವಾಗ ವ್ಹಿಟ್‌ಮನ್ ಕವಿಯ `Leaves of Grass' ನೆನಪಾಗುವುದೆಂದು ಅಮೂರರು ಹೇಳಿದ್ದಾರೆ.

``ಹುಲ್ಲಿನ ದಳ, ದೈವಿಕತೆಯ ಅಮರತ್ವದ ಧ್ವಜವಾಗಿ ತೋರಿದಂತೆ, ಶ್ರಾವಣದ ಹುಲ್ಲು ಹೂವು ಅಮರ್ತ್ಯದ ಕನಸನ್ನು ನನಸಾಗಿ ತೋರಿಸುವ ಸಾಧನಗಳಾಗಿವೆ":

ಮತ್ತೆ ಶ್ರಾವಣಾ (ನಾಕು ತಂತಿ) ವರ್ಷಗಳು ಉರುಳಿದಂತೆ ಶ್ರಾವಣ ಮತ್ತೆ ಮತ್ತೆ ಬರಬೇಕಾದ ತಿಂಗಳು. ಶ್ರಾವಣದ ಉನ್ಮತ್ತತ್ತೆಯ ಅನೇಕ ನಿಲುವುಗಳನ್ನು ``ಶ್ರಾವಣದ ವೈಭವದಲ್ಲಿ ಕಂಡು ಬಂದರೆ, ಇಲ್ಲಿ ಶ್ರಾವಣ ದೇವಲೋಕದ ಹರಿಕಾರ".

"ಮೈದಂಡಿಗಿ ಮಾಡಿ । ಹಾಡಿದೀ ಶಿವನಾ"
ಈ ತನ್ಮಯತೆಯೇ ಹಾಡಿನ ಜೀವಾಳವಾಗಿದೆ.
ಕೈಲಾಸದ ಬುಡಕೆ ಸಿಕ್ಕವನಾ ।
ಹತ್ತು ತಲೆಯವನಾ । ಬಿಡಿಸೋ"

ಬಹುಶಃ ಕೈಲಾಸ ಪರ್ವತವನ್ನು ಎತ್ತಿದ ರಾವಣನ ಅಹಂಕಾರದ ಪ್ರತೀಕವಾಗಿ ಅವನ ಬುದ್ಧಿಯನ್ನು ಅಹಂಕಾರದಿಂದ ಬಿಡಿಸಿ ಆತ್ಮಾರಾಮನಿಗೆ ಒಪ್ಪಿಸ

ಬೇಕು ಎನ್ನುತ್ತದೆ ಕವನ. ಹರಿಹರ ಒಂದಾದವನಾ ಚೈತ್ರದ ಸಸಿ ದವನ, ಹಂಪೆಯಲ್ಲಿನ ಅಧಿ ದೇವತೆ ಹರ-ಹರಿಗೆ, ತುಂಗಭದ್ರೆಯ ಶಿಖರವಕ್ಕೆ ಕೂಡಿ ಹಾಡಬೇಕು. ಹರ ಶ್ರುತಿಯನ್ನು ಕಂಡರೆ ಹರಿ ಕೃತಿಯನ್ನು ತರುತ್ತಾನೆ.

ನೀವು ತಂದೀ ತಾಯೀನ ವಗ ।
ಕಂಡದು ನಾ ನಿಮಗ ॥

ಎಂದು ಎರಡನ್ನೂ ಕೂಡಿಸಿದ್ದಾರೆ.

ಶ್ರಾವಣ ಮಾಸದ ಕೃಷ್ಣ ಪಕ್ಷದ ರೋಹಿಣಿ ನಕ್ಷತ್ರದಲ್ಲಿ ಹುಟ್ಟಿ ತಂದೆ ತಾಯಿಗೆ ಬಂಧನ ಬಿಡಿಸಿದ ಕೃಷ್ಣ, ಅಸೂರರ ಕೆಸರು ಕಳೆದು ಕಾರಣಿಕ ವಿಶ್ವಕ್ಕೆ ತಂದೆಯಾದ.

``ಭ್ರಮರಾ ಭ್ರಮರಾಂಭಾ । ನಮ್ಮಾ ನಿಮ್ಮಾ ತವರು" ಕೃಷ್ಣನ ಉಪಾಸನೆ ಮಾಡುವ ಭಾಗವತ ಸಂಪ್ರದಾಯದ ಕವಿಗಳದು ಭ್ರಮರದ ಜಾತಿ ಎಂದು ಹೇಳುತ್ತಾರೆ. ಜೇನು ಸಂಗ್ರಹಿಸುವ ಮಧು ವಿದ್ಯೆ ಅದಕ್ಕೆ ಸಹಜ. ಹೀಗೆ ಅದು ಹರ-ಹರಿ ವಿಭೇದದ ಕೃಷ್ಣೋಪಾಸನೆಯ ಮಧು ವ್ರತದ ಕಾವ್ಯ ಮಾರ್ಗ.

ಮೂರನೆಯ ಭಾಗದಲ್ಲಿ ನವಿಲಿನ ಪ್ರತಿಮೆ ಇದೆ. ಭ್ರಮರದಂತೆ ನವಿಲು ಕೂಡ ಕಾವ್ಯ ಪ್ರತಿಭೆಯ ಪ್ರತೀಕವಾಗಿದ್ದು ನವಿರು ಮತ್ತು ನವಿಲು ಈ ಶಬ್ದಗಳು ಮೂಲತಃ ಒಂದೇ ಆಗಿವೆ. ನೃಪತುಂಗ ಕವಿಗಳಿಗೆ ರಾಜಮಾರ್ಗವನ್ನು ತೆರೆದವನು ಸಂಪ್ರದಾಯ ಪ್ರವರ್ತನಾಗುತ್ತಾನೆ. ಶ್ರುತಿಗಳು ಇಪ್ಪತ್ತೆರಡು ಇದ್ದೂ, ಕೃತಿಗಳು ಸಾವಿರ ಸಾವಿರ ಸಂಖ್ಯೆಯಲ್ಲಿರುವುದು ನಮ್ಮ ಸಂಗೀತದಲ್ಲಿ, ಎಲ್ಲರಿಗೂ ತಿಳಿದ ವಿಷಯ. ಏಳು ಸ್ವರಗಳ ಮೂರು ಗ್ರಾಮಗಳು ಒಂದು ಧ್ರುವ ಶ್ರುತಿ ಕೂಡಿಕೊಂಡು ಸಂಗೀತದಲ್ಲಿ ಇಪ್ಪತ್ತೆರಡು ಶ್ರುತಿಗಳಾಗುತ್ತವೆ. ಗುಡ್ಡ ಗುಡ್ಡಕ್ಕೆ ನಿಂತು ನವಿಲು ಕೇಕೆ ಹಾಕಿದಾಗ ಅದು ಗಂಧರ್ವರ ನಗರವಾಗುವುದರಲ್ಲಿ ಆಶ್ಚರ್ಯವಿಲ್ಲ. ನವಿಲಿನ ಕೇಕೆ ಷಡ್ ಸ್ವರದಲ್ಲಿ ಎಂದು ಶಾಸ್ತ್ರ ಹೇಳುತ್ತದೆ. ಸಂಗೀತಕ್ಕೆ ಗಾಂಧರ್ವ ವಿದ್ಯೆ ಎಂಬ ಹೆಸರು ರೂಢವಾಗಿದೆ. ಶ್ರಾವಣದಲ್ಲಿ ಅಭಿಜಿದ್ಯೋಗ ಎಂಬ ಮಾತು ಪ್ರಗತಿಯ ಊರ್ಧ್ವಗಾಮಿತ್ವಕ್ಕೆ ಬಂದಿದೆ.

ಕಾವ್ಯದ ಉದ್‌ಯೋಗ - ಊರ್ಧ್ವಗಾಮಿಯಾದ ಯೋಗ, ಇಲ್ಲಿ ಪ್ರಾರಂಭವಾಗುತ್ತದೆ ಎಂಬ ಸೂಚನೆಯೊಂದಿಗೆ ಕವಿತೆ ಮುಗಿಯುತ್ತದೆ. ಬೇಂದ್ರೆಯವರು ಹುಟ್ಟಿದ್ದು ಮಾಘದಲ್ಲಿ; ಅವರಿಗೆ ಸ್ಫೂರ್ತಿಯ ಕೇಂದ್ರ, ಶ್ರಾವಣಮಾಸ ಎಂದು ಕುರ್ತುಕೋಟಿಯವರು ನೆನಪಿಸುತ್ತಾರೆ.

ಮತ್ತೆ ಶ್ರಾವಣಾ ಬಂದಾ (ನಾಕು ತಂತಿ) ವರ್ಷಗಳು ಉರುಳಿದಂತೆ ಶ್ರಾವಣ ಮತ್ತೆ ಮತ್ತೆ ಬರಬೇಕಾದ ತಿಂಗಳು.

ಶ್ರಾವಣಾ - ಆಗಸ್ಟ್ ಇದು ಶ್ರೀ ಅರವಿಂದರ ಮಾಸ. ಶ್ರೀ ಅರವಿಂದರ ಸಾವಿತ್ರಿ ಮಹಾ ಕಾವ್ಯದಿಂದ ಮತ್ತೆ ನವೀನ ಕಾವ್ಯಕ್ಕೆ ಆರಂಭವಾಗಿದೆ ಎಂಬ ಧ್ವನಿ. ``ಮತ್ತೆ ಶ್ರಾವಣಾ ಬಂದಾ" ಕವನದ ಸೃಷ್ಟಿಯ ಹಿನ್ನೆಲೆ ಎಂದು ಅವರೇ ಹೇಳಿದ್ದಾರೆ. ಶ್ರಾವಣ ಮಾಸವು ಭಾರತೀಯ ಸಂಸ್ಕೃತಿಯ ದೃಷ್ಟಿಯಿಂದ ಅತ್ಯಂತ ಮಹತ್ವದ ಮಾಸ.

ಪ್ರಾರಂಭದಲ್ಲಿ ಶ್ರೀ ಅರವಿಂದರನ್ನು ಶ್ವೇತ ಹಾಗೂ ಕೆಂಪು ಕಮಲಗಳಿಂದ ಪೂಜಿಸುತ್ತ ಒಂದು ಶ್ರಾವಣದಲ್ಲಿ ಹೀಗೆ ಚಿಂತಿಸುತ್ತಾರೆ.

"ವಿಶ್ವಂ ಆರ್ಯಂ ಕೃಣ್ವಾನ್ ಅಮೃತಸ್ಯ ಪುತ್ರಾ"
"ಓಂ ದೇವಾಯ ಜನ್ಮನೇ"

ಎಂಬ ವೇದ ಮಂತ್ರ ಸೃಷ್ಟಿಯಾದ ಈ ಭಾರತದಲ್ಲಿ ತೆರೆಯ ಮರೆಯಾಗಿ ಇರುವ ಬಯಲಿನ ಬೇರನ್ನೂ ಕಂಡು ಹಿಡಿದು ಜ್ಞಾನ ವೃಕ್ಷವನ್ನು ಬೆಳೆಸಿದ ಮಹಾ ಋಷಿಗಳು ಆಗಿ ಹೋಗಿದ್ದಾರೆ. ಈ ಪುರಾಣ ಸಂಚಯದ ಮೂಲಕ ಈ ಕಾಲಕ್ಕೆ ಅರವಿಂದರು ಕಂಡ ದರ್ಶನವು ದೇವನಿಗೂ, ಮಾನವನಿಗೂ ಇರುವ ಸಂಬಂಧ ಹಾಗೂ ಮುಕ್ತಿಯಾ ಆಚೆಯ ಭಕ್ತಿಯ, ಭಗ್ವತ್ ಸೃಷ್ಟಿಯ ಮಹತ್ವ ಸಾವಿತ್ರಿ ಮಹಾಕಾವ್ಯದ ಮೂಲಕ ಪ್ರಕಟವಾಗಿದೆ ಎಂಬುದು ಬೇಂದ್ರೆಯವರ ಸ್ವಾನುಭವ. ಸಾವಿತ್ರಿ ಮಹಾಕಾವ್ಯವು ಸಾಮ ಪ್ರಬಂಧವಾದ ವೇದ ಹೃದಯವನ್ನು ಅರಿತಿದೆ ಎಂದು ಹೇಳಿ, ವೇದಗಳಿಗೂ ವೇದ ಪುರುಷನಾದ ಶ್ರೀ ಕೃಷ್ಣನಿಗೂ ಇರುವ ಸಂಬಂಧ ಹಾಗೂ ಶ್ರೀ ಕೃಷ್ಣನ ರಾಸಲೀಲೆಯ ಅಂತರಾರ್ಥವನ್ನು ಭಾರತೀಯರು ಅರಿತು ಕೊಳ್ಳಬೇಕು ಎಂಬುದಾಗಿ ಬೇಂದ್ರೆ ವಿನಂತಿಸಿದ್ದಾರೆ. ಭಾರತೀಯರು ಸಂಕುಚಿತ ಭಾವನೆಯನ್ನು ತ್ಯಜಿಸಿ Global Consciousness - ವಿಶ್ವ ಮಾನವನ ಅರಿವು ಉಳ್ಳವರಾಗಿರಬೇಕು (ಮೀನ-ಮೇಷ ಬಿಟ್ಟು) ಸಿಂಹ ರಾಶಿಯ ರವಿ, ಧನಿಷ್ಠ, ಹಾಗೂ ಶತತಾರಕಾ ನಕ್ಷತ್ರಗಳು ಮುಪ್ಪುರಿಗೊಂಡು ``ಭೂಮಂಡಲ ದೇವನ ಮನೆ ಚಂದಾ" ಎಂಬ ಪ್ರಜ್ಞೆಯ ಮಳೆಯನ್ನು ನಮ್ಮ ಭಾರತದ ಮೇಲೆ ಪ್ರೀತಿಯ ಕೃಪೆಯಿಂದ ಕರೆಯಲಿ ಎಂಬ ಆಶಯ ಈ ಕವನದ ಕೇಂದ್ರ ವಿಚಾರ.

``ಅಧಮಾ, ಮಾಧ್ಯಮಾ, ಉತ್ತಮಾ"ದಿಂದ ``ಕೃಷ್ಣ ಕೈಯಲ್ಲಿ ಶಿವಾ ಸಾವಿತ್ರಿಯ ಪಟ್ಟಾ" ವರೆಗಿನ ಈ ಕವನದ ಎರಡನೆಯ ಮಹತ್ವದ ಅಂಶ.

ಗಣಪತಿ, ಶಿವ ಮತ್ತು ವಿಷ್ಣು ಇವು ವೇದದೊಳಗಿನ ಅತ್ಯಂತ ಮಹತ್ವದ ದೇವತೆಗಳು. ಇವರೇ ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣ.

ಅಧಮಾ ಎಂಬುದಕ್ಕೆ ಹೀನಾರ್ಥ ಕಲ್ಪಿಸದೆ ಅದು ಸೃಷ್ಟಿಯ ಸ್ಥಾನ - ಗಣಪತಿಯ ಸ್ಥಾನ - ಬ್ರಹ್ಮನ ಸ್ಥಾನ ಎಂದಿದ್ದಾರೆ. ಈ ವಿಚಾರಕ್ಕೆ ಶ್ರೀ ಅರವಿಂದರ ವೇದಾರ್ಥ ಚಿಂತನ. ಈ ಚಿಂತನ ಬೇಂದ್ರೆಯವರಿಗೆ ಒಂದು ಹೊಸ ದೃಷ್ಟಿಯನ್ನು ದಯ ಪಾಲಿಸಿತು. ಬ್ರಹ್ಮಣಸ್ಪತಿ ಎಂದರೇ ಗಣಪತಿ. ಸೃಷ್ಟಿಯ ದೇವತೆ ವಿಷ್ಣು ಹಾಗೂ ಮಹೇಶ ಸ್ಥಿತಿ ಹಾಗೂ ಲಯಕಾರಕ ದೇವತೆಗಳು ಎಂಬುದರಿಂದ ಈ ಕವನದಲ್ಲಿ ಗಣಪತಿಯ ಬಗ್ಗೆ ಭಾರತೀಯರಿಗೆ ಇರುವ ಅಜ್ಞಾನವನ್ನು ಹಾಗೂ ಅಂಧಃಕಾರವನ್ನು ಹರ ಮತ್ತು ಹರಿ ಪರಿಹರಿಸಬೇಕಾಗಿ ಕೋರಿದ್ದಾರೆ.

ಭದ್ರಾಕಿರಣಾ, ಚಂದ್ರಾಭರಣಾ, ಬಾಲಚಂದ್ರಾ, ಚಾಂಗುಭಲಾ ಇವು ಶಿವನ ಹೆಸರುಗಳು.

ಏಕದಂತಾ, ವಕ್ರದಂತಾ, ವಕ್ರತುಂಡಾ, ಸುಂಡಿಲಿನಲಿದುಂಡಾ ಮೊದಲಾದುವು ಗಣಪತಿಯ ಸ್ವಭಾವೋಕ್ತಿ ಅಲಂಕಾರ ಸೂಚಕಗಳು. ಸೊಂಡಿಲಿನಿಂದ ಮೋದಕ, ಮಕರಂದ ಸಂಗ್ರಹಿಸಿದ ಗಣಪತಿಯ ಬಾಲಲೀಲೆಗಳನ್ನು ಕಂಡು ತಂದೆಯಾದ ಶಿವನಿಗೆ ಆನಂದವಾಗುತ್ತದೆ. ಈ ಗಣಪತಿ ಸಾಮಾನ್ಯನಲ್ಲ, ಇವನು ಸಾಸಿವೆ ಕಾಳೂ ಆಗಬಲ್ಲ, ಇಡೀ ವಾತಾಪಿಗೆ ಹರ್ಷವನ್ನು ಕೊಡ ಬಲ್ಲನು. ಇವನು ಓಂಕಾರ ಸ್ವರೂಪನು. ಸರ್ವ ವ್ಯಾಪಿಯಾದ ಇವನ ಜ್ಞಾನ ಮಾಡಿಕೊಳ್ಳುವುದು ಅವಶ್ಯ ಎಂದು ಶಿವನು ಅರಿತನು. ಮರಳಿನ ಪ್ರದೇಶದಲ್ಲಿ ಅಡ್ಡಾಡುತ್ತಾ - ಮಣ್ಣು, ಸೂರ್ಯ, ನಿಸರ್ಗ ಸೃಷ್ಟಿ (ವಿಸರ್ಗ-ವಿಶೇಷ ಸೃಷ್ಟಿ), ಪ್ರಕಾಶ (ಭರ್ಗ), ಶಕ್ತಿ (ದುರ್ಗ) ಮತ್ತು ಕೊನೆಗೆ ದೊಡ್ಡ ಹೊಟ್ಟೆ ಉಳ್ಳ, ಅನಾಕಲನೀಯ ವಿಚಾರ ಮಾಡುತ್ತಾ ನಿರ್ಣಯಕ್ಕೆ ಬಂದನು. ಈ ಗಣಪತಿ ನನ್ನ ಮಗನಾಗಿದ್ದರೂ ನನ್ನವನಲ್ಲ, ಇವನು ಸೃಷ್ಟಿ ದೇವತೆ ಬ್ರಹ್ಮ. ಆದುದರಿಂದ ಇವನು ನನ್ನ ಮಗನಾಗುವುದಕ್ಕಿಂತ ಶ್ರೀ ಕೃಷ್ಣನ ಮಗನಾಗಲೀ. ಅದರಂತೆ ಚಂದ್ರ ಭಟ್ಟಾ (ಶಿವ), ಗಣಪತಿಯನ್ನು ಬ್ರಹ್ಮ ರೂಪದಲ್ಲಿ ಕೃಷ್ಣನ ಹೊಕ್ಕಳದ ಕಮಲದಲ್ಲಿ ಜನಿಸುವಂತೆ ಮಾಡಿರಬೇಕು ಎಂಬುದು ಕವಿಯ ಕಲ್ಪನೆ. ಇದರಿಂದ ಈ ಬ್ರಹ್ಮನಿಗೆ ಗಣಪತಿಗೆ ಸಾವಿತ್ರಿಯ ಪಟ್ಟಾ (ಸಾವು ಇಲ್ಲದ ಪಟ್ಟ ಎಂದು ಒಂದು ಅರ್ಥವಾದರೆ) ಮಹಾ ಗಣಪತಿ ಸದೃಶ್ಯರಾದ ಶ್ರೀ ಅರವಿಂದರು ಸೃಷ್ಟಿಸಿದ ಸಾವಿತ್ರಿ ಕಾವ್ಯಕ್ಕೆ ಅಮರವಾದ ಸ್ಥಾನವಿದೆ ಎಂಬ ಅರ್ಥವೂ ಇಲ್ಲಿದೆ. ಇದೇ ಈ ಕವನದ ಪ್ರಮುಖವಾದ ಧ್ವನಿ. ``ಓಂ ಈಂ ಮಹಾಗಣಪತಯೇ ನಮಃ" ಎಂಬ ಮಂತ್ರದಲ್ಲಿ ಓಂ ಸ್ಥಾನಕ್ಕೆ ಗಣಪತಿ - ಬ್ರಹ್ಮನಿದ್ದಾನೆ. ಈಂ ಸ್ಥಾನಕ್ಕೆ ಸರಸ್ವತಿ ಇದ್ದಾಳೆ. ಈ ಬ್ರಹ್ಮ ಸರಸ್ವತಿ ದಾಂಪತ್ಯಕ್ಕೆ ಅಳಿವು ಇಲ್ಲ. ಇವು ಎರಡೂ ಸೃಷ್ಟಿ ಬೀಜಗಳು ಎಂಬುದನ್ನು ಬೇಂದ್ರೆಯವರು ಮಂತ್ರ ಶಾಸ್ತ್ರ ಅಧ್ಯಯನದಿಂದ ದೃಢ ಪಡಿಸಿ ಕೊಂಡಿದ್ದರಿಂದ ಈ ಶಿವನ ಸೃಷ್ಟಿಯ ಹಿನ್ನೆಲೆಯಾಯಿತು.

ಈ ಎಲ್ಲ ಚಿಂತನೆ ಬೇಂದ್ರೆಯವರು ಒಂದು ಬೆಳದಿಂಗಳ ರಾತ್ರಿ ಮಾಡಿರಲು ಸಾಕು. ಅದರಿಂದ ಆದ ಪ್ರಕಾಶ-ಸೂರ್ಯ-ಆನಂದ ಕವಿಯ ಪ್ರಾಪ್ತಿ. ಈ ಪ್ರಾಪ್ತಿಗೆ ಅಗ್ನಿ ಹಾಗೂ ಸೋಮ ಸೂಕ್ತಗಳ ವಿವರಣೆಯನ್ನು ಕೊಟ್ಟ ಶ್ರೀ ಅರವಿಂದರೇ ಕಾರಣ. ಅವರಿಂದ ಹೊರ

ಹೊಮ್ಮಿ ಬಂದ ಘಮಾ ಘಮಾ ಗಂಧ ಈ ಕವನ ಎಂಬುದಾಗಿ ಕವಿ, ಕವನ ಮುಕ್ತಾಯಕ್ಕೆ ತಮ್ಮ ಕವನದ ಆಕಾರವನ್ನು ವಿನಯಪೂರ್ವಕವಾಗಿ ಬಹಿರಂಗ ಪಡಿಸಿದ್ದಾರೆ. ಈ ಚಿಂತನ ಮತ್ತು ಶಿವನ ಸೃಷ್ಟಿ ಶ್ರಾವಣ ಮಾಸದಲ್ಲಿಯೇ ಆಗಿದೆ ಎಂಬುದನ್ನು

``ಶ್ರಾವಣ ಬಂದಾ ಶಿವಿ ತೆರಿ'' ಎಂಬ ಸಾಲು ಸಮರ್ಥಿಸುತ್ತದೆ. ಇದು ಬೇಂದ್ರೆಯವರ ಶ್ರಾವಣ ಪ್ರತಿಭೆಯ ಒಂದು ರೀತಿ.

### ಶ್ರಾವಣ

ಪುಣೆ-ಮುಂಬೈ ನಡುವೆ ಬರುವ ಖಂಡಾಲಾ ಘಾಟಿನಲ್ಲಿ ಶ್ರಾವಣದ ಅವರ್ಣನೀಯ ಸೌಂದರ್ಯವನ್ನು ಕಂಡು ಹಾಡಿದ್ದ ಹಾಡು. ಮುಂದೆ ೧೯೪೦ರಲ್ಲಿ ಚಿಕಿತ್ಸೆಗೆಂದು ಬಂದಾಗ ರಾತ್ರಿಯ ರೌದ್ರ ಮಳೆಗೆ ಅದೇ ರಾತ್ರಿ ಹೆದರಿಕೆಗೆ ಕಾರಣವಾಯಿತೆಂದು ತಮ್ಮ ಮಗನಿಗೆ ಹೇಳಿದ್ದಾರೆ.

``ತಿರು ತಿರುಗಿ ಹೊಸತಾಗಿರಿ'' ಎಂಬಂತೆ ಶ್ರಾವಣದ ವೈಭವವನ್ನು ವಿವಿಧ ಭೂಭಾಗಗಳ ಮೇಲೆ ಕಂಡು ಕವಿಯ ಮನಸ್ಸು ಹೀಗೆ ಹಾಡಿದೆ. ``ಐರಾವತ ಮುಗಿಲು'' ಕಡಲಿನ ಸ್ವರೂಪ, ಶ್ರಾವಣದಲ್ಲಿ ರಾವಣನ ದೈತ್ಯ ಸ್ವರೂಪ ತಳೆದ ಹಾಗೆ, ಗಾಳಿ ಭೈರವನ ವೇಷದಂತೆ ಕಾಣುತ್ತದೆ.

ಘಟ್ಟಕ್ಕೆ ರಾಜ್ಯ ಪಟ್ಟಕ್ಕೆ ಬಾನಿನ ಮಟ್ಟಕ್ಕೆ ಮುಗಿಲು ಏರಿ ನಿಂತಿದೆ. ಹೊಳೆಗಳಲ್ಲಿ ಮಳೆಯ ನೀರು ತುಂಬಿ ನಿಂತಾಗ ಹೊಳೆಗೆ ಮಳೆಗೆ ಲಗ್ನವಾಯಿತೆನ್ನುತ್ತಾರೆ. ಭೂಮಿಯು ಆ ಸಂಭ್ರಮದಲ್ಲಿ ಮಗ್ನಳಾಗಿರುವಂತೆ ತೋರುತ್ತದೆ.

ಊರು ಕೇರಿಯಲ್ಲಿ, ಶ್ರಾವಣ ಮಾಸದ ನಾಗ ಪಂಚಮಿಯ ವೈಭವ, ಜೋಕಾಲಿ, ಉಂಡಿ ಇವು ನೆನಪನ್ನು ಕೋರುತ್ತವೆ. ಮನೆ ಮನೆಯಲ್ಲೂ ಅಣ್ಣ-ತಂಗಿ, ಅಕ್ಕ-ತಮ್ಮಂದಿರ ವಿಶ್ವಾಸ ಒಡನಾಟಕ್ಕೆ ಮೆರಗು ಕೊಡುತ್ತದೆ.

ಮತ್ತೆ ಎದುರು ನಿಂತ ಪಶ್ಚಿಮ ಘಟ್ಟಗಳ ಸಾಲು ಕುಣಿಯ ಅಂಗಿತೊಟ್ಟಂತೆ ಹಸಿರು ಮಕಮಲ್ಲಿನ ಬಟ್ಟೆ ತೊಟ್ಟು ಜಾತ್ರೆಗೆ ಹೊರಟು ನಿಂತಂತೆ ಕವಿಗೆ ಭಾಸವಾಗುತ್ತದೆ. ಸುತ್ತಲಿರುವ ಕಾಡು, ಮದು ಮಗನ ಹಾಗೆ ತಲೆಗೆ ಭಾಶಿಂಗ ಕಟ್ಟಿ ಹರ್ಷದಿಂದ ದಿಬ್ಬಣ ಹೊರಟಿದೆ.

ನೆಲ ಹಸಿರುಟ್ಟು ಬಸಿರಿಯ ಹಾಗೆ, ಅರಿಸಿನ, ಬಂಗಾರದ ಹೂಗಳನ್ನು ತೊಟ್ಟಂತೆ ಕಾಣುತ್ತದೆ. ಸಣ್ಣ ಸಣ್ಣ ಗುಡ್ಡಗಳು ಸ್ಥಾವರ ಲಿಂಗದಂತೆ ಕಾಣಿಸಿ, ಅವಕ್ಕೆ ಅಭ್ಯಂಜನ ಮಾಡಿಸುವ ಹಾಗೆ ಮೋಡಗಳು ಸುತ್ತುವರೆದಿವೆ ಎನ್ನುತ್ತಾರೆ. ಶ್ರಾವಣದಲ್ಲಿ ಹಾಲಿನ ತೊರೆ ಹರಿದ ಹಾಗೆ ಭಾಸವಾಗುತ್ತದೆ. ಒಟ್ಟಿನಲ್ಲಿ ಶ್ರಾವಣವನ್ನು ವಿವಿಧ ಕೋನಗಳಿಂದ ವಿವಿಧ ಭೂಭಾಗಗಳ ಮೇಲೆ ಕಂಡು ಆನಂದಿಸಿದೆ ಕವಿ ಹೃದಯ.

### ಚಿತ್ತಿಯ ಮಳೆಯ ಸಂಜೆ

ಚಿತ್ತಾ ನಕ್ಷತ್ರ ಮಳೆ ನಕ್ಷತ್ರ, ಅದರ ಸೊಬಗನ್ನು ಬರುಡು ಪ್ರೀತಿಗೆ ಹೋಲಿಸಿದ್ದಾರೆ. ಒಂದೇ ನಮೂನೆ ಸುರಿಯುವ ಮಳೆ, ಕವಿಯ ಭಾವನೆಗಳನ್ನು ಕೆರಳಿಸಿವೆ. ಮಳೆಯು ಮುಗುಳು ನಗುತ್ತಿರುವಂತೆ, ಮಿಂಚಿನಂತೆ ನೋಡು ನೋಡುತ್ತಿರುವಂತೇ ಹರ ದಾರಿ ಹರಿಯುವ ನೀರು ಗುಡ್ಡದ ಮೇಲೆ ಮೈ ಚಾಚಿರುವ ಬಿಸಿಲು, ಹುಲ್ಲುಗಾವಲಿಗೆ ತಲೆ ಚಾಚಿರುವಂತೆ ಕಾಣುತ್ತದೆ.

ಪಶ್ಚಿಮದಲ್ಲಿ ಮುಳುಗುವ ಸೂರ್ಯ, ಪೂರ್ವದಲ್ಲಿ ಹುಟ್ಟುವಾಗ ಅರಿಶಿನ ಕುಂಕುಮದ ಜೊತೆಗೆ ಬಸುರಿ (ಮಂಗಳ ದ್ರವ್ಯಗಳೊಡನೆ)ಯೊಂದಿಗೆ ಹೊರಟಂತಿದೆ. ಸಂಜೆ ಸೂರ್ಯ ಹಗಲಿನ ಶಲ್ಯವೆಂಬಂತೆ ನವಿಲಿನ ಗರಿಗಳು ಮೋಡಗಳಿಗೆ ಸೆರಗು ಹಾಸಿದಂತೆ ವರ್ಣಿಸುತ್ತಾರೆ.

ಹೊಲದಂಚಿನ ಬಯಲು ಮುತ್ತಿನ ಸೇಸೆ ತಳೆದು ದಿನವೆಲ್ಲ ದುಡಿದ ರೈತರ ಮುಖಗಳು, ಉದ್ದ ಬೆಳೆದು ನಿಂತ ಪೈರಿಗೆ ಕಳಸವಿಟ್ಟಂತೆ ಕಾಣುತ್ತದೆ. ಹದವಾಗಿ ಸುರಿಯುವ ಮಳೆ ಸುಗ್ಗಿಯ ಚಿತ್ರವನ್ನು ಚಿತ್ರಿಸಿದೆ. ಹೊಲದಲ್ಲಿ ದುಡಿದವರಿಗೆ ಚವರಿ ಬೀಸಿದಂತೆ ಕಾಣುತ್ತದೆ.

ತೋರಣದಂತೆ ಕಂಗೊಳಿಸುವ ಬೆಳ್ಳಕ್ಕಿಯ ಸಾಲು, ಮೆರವಣಿಗೆ ಹೋಗುವ ಪರಿಯೇ ಚೆನ್ನ. ಸಂಜೆ ಮುಗಿಯುವ ಹೊತ್ತಿಗೆ ಒಂದಾಗುವಲೋಕ ಚಿತ್ರಿಸಿ ನಾಡೆಲ್ಲ ಕವಿಯಾಗಿ ಕೇಳುವಂತೆ ಹಕ್ಕಿ ಪಕ್ಕಿಗಳ ಕಲರವ ಗೂಡು ಮುಟ್ಟುತ್ತದೆ.

ಈ ಕವನ ಸಾಧನ ಕೇರಿಯಲ್ಲಿ ಒಂದು ಸಂಜೆ ಕವಿ ಅನುಭವಿಸಿದ ಆನಂದದಿಂದ ಹೊರ ಹೊಮ್ಮಿದ ಕವನವಾಗಿದೆ.

### ಮತ್ತೆ ಬಂತು ಶ್ರಾವಣ

ಈ ಕವನ ಸಂಗ್ರಹವು ಕೌಟುಂಬಿಕ ವಿಭಾಗಕ್ಕೆ ಸೇರುತ್ತದೆ. ಇದರಲ್ಲಿ ಶ್ರಾವಣ ಬಂತು - ಬಾಲ್ಯ ಕಾಂಡ ಮತ್ತು 'ಮತ್ತೆ ಬಂತು ಶ್ರಾವಣ' ಎಂಬ ಭಾಗಗಳಿವೆ. ಒಂದನೆಯ ಭಾಗವಾದ ಬಾಲ್ಯ ಕಾಂಡದಲ್ಲಿ ಅವರ ಜೀವನದ ಸ್ಮೃತಿ ಚಿತ್ರವಿದೆ. ಎರಡನೆಯ ಭಾಗದಲ್ಲಿ 13 ಕವನಗಳಿವೆ. ಇವೆಲ್ಲ ಬೇಂದ್ರೆಯ ಪತ್ನಿ ಲಕ್ಷ್ಮೀಬಾಯಿ ಬೇಂದ್ರೆಗೆ ಸಂಬಂಧಿಸಿದವುಗಳು. ಬೇಂದ್ರೆಯವರಿಗೆ ಯಾವ ಸಾಧನೆಯಲ್ಲೂ ಪತ್ನಿಯ ಜೊತೆ ಬೇಕು. ಪತ್ನಿಯ ಆರೋಗ್ಯ ಕೆಟ್ಟಿತು. 4-5 ದಿನಗಳ ಕಾಲ ಪ್ರಜ್ಞೆ ತಪ್ಪಿ ಮತ್ತೆ 24 ಗಂಟೆಗಳ ಎಚ್ಚರ ಬಂದು ಮಾರನೆಯ ಬೆಳಗ್ಗೆ ನಿಧನ ಹೊಂದಿದರು.

ಪತ್ನಿ ಮರಣ ಶಯ್ಯೆಯಲ್ಲಿರುವಾಗ ಮತ್ತು ಅವಳ ಮರಣೋತ್ತರ ಪರಿಸರ ಗಂಭೀರ, ವಾತಾವರಣ ದುಃಖ ಚಿಂತೆಗಳಿಂದ ತುಂಬಿದ್ದು, ಇಂಥ ಪರಿಸ್ಥಿತಿಯಲ್ಲಿ ಕವನ ರಚನೆ ಅಸಾಧ್ಯವೆನಿಸಿದರೂ ಕವಿಗೆ ಉತ್ + ಯೋಗ ಸಾಧಿಸಿದೆ.

ಪತ್ನಿಯ ಮರಣದ ನಂತರ ಎರಡು ವರ್ಷಗಳು ಕಳೆದು ಹೋಗಿದೆ. ಮೂರನೆಯ ವರ್ಷ ಶ್ರಾವಣದ ನೆನಪಾದಾಗ ಕವಿಗೆ ಬ್ರಹ್ಮ ರಂಧ್ರದಿಂದ ಬೆನ್ನು ಹುರಿಯ ತನಕದ ಮೂಲಾಧಾರ ಚಕ್ರದವರೆಗೂ ಸಾತ್ವಿಕ ಕಂಪನಾನುಭೂತಿಯಾಗುತ್ತದೆ. ಆಗ ಪತ್ನಿಯ ಚಿಂತೆಯಡಗಿ ಮಗಳ ಭವಿಷ್ಯದ ಸ್ಮರಣೆಯಲ್ಲಿ (ಮಂಗಲಾ ಮುಖಿ ದೂರದಲ್ಲಿ) ಕವಿಯು ಸಮಸ್ಥಿತಿಗೆ ಬಂದುದರ ಅಂತರಂಗ ಕವನ ``ಮತ್ತೆ ಬಂತು ಶ್ರಾವಣಾ''.

### ಸಣ್ಣ ಸೋಮುವಾರ

ಅನುಭಾವದ ನೆಲೆಯೊಂದು ಶ್ರಾವಣದ ಅನುಭವದೊಳಗೆ ಹೇಗೆ ಅರಳುತ್ತದೆಂಬುದಕ್ಕೆ ``ಸಣ್ಣ ಸೋಮುವಾರ'' ಕವನವನ್ನು ನೋಡಬಹುದು. ಮುಖ್ಯವಾಗಿ ಇಲ್ಲಿ ನಿರೂಪಿತವಾಗಿರುವುದು ಆಸ್ತಿಕತೆಯ ಅನುಭವವಾದರೂ ಈ ಆಸ್ತಿಕತೆಯ ಅನುಭವಕ್ಕೆ ನಮ್ಮನ್ನು ಸಿದ್ಧಗೊಳಿಸುವುದು, ಶ್ರಾವಣದ ನಿಸರ್ಗಾನುಭವ. ಶ್ರಾವಣದ ಬಗ್ಗೆ ಇರುವ ಕವಿಯ ಶ್ರದ್ಧೆ, ಪ್ರೀತಿ, ತನ್ಮಯತೆ ಅನುಭಾವಕ್ಕೆ ವಿಸ್ತರಿಸಿದೆ. ಅನುಭಾವದ ಗ್ರಹಿಕೆಯಲ್ಲಿ ಮುಖ್ಯವಾಗಿರುವ ಆರ್ದ್ರತೆ ಮುಚ್ಚಿಲ್ಲದ ತೆರೆದ ಅಂತಃಕರಣ, ಆಸ್ತಿಕ ಶ್ರದ್ಧೆ. ಈ ಅಂಶಗಳು ಶ್ರಾವಣದ ಹಿನ್ನೆಲೆಯನ್ನು ತಮ್ಮ ಸತ್ವದಿಂದ ಬೆಳಗಿಸಿವೆ. ಕವಿಯ ತವಕ ಬಾಲ್ಯದಲ್ಲಿಯಂತೆ ಈಗಲೂ ಸಣ್ಣ ಸೋಮೇಶ್ವರನನ್ನು ಕಾಣಲು ಬಯಸುತ್ತದೆ.

``ಮಾನಸ ಸರೋವರದೊಳ್ಕ ಹರಹರ ಮಹಾದೇವ'' ಎಂದು ಜೀವ ಈಸಾಡಲು ತಕ್ಕ ಹಿನ್ನೆಲೆಯನ್ನು ಶ್ರಾವಣದ ಜಲಮಯ ಆವರಣ ಒದಗಿಸಿದೆ. ಅನುಭವದ ನೆಲೆಯ ವಾಸ್ತವಿಕ ಜಗತ್ತು ಇಲ್ಲಿ ಅನುಭಾವದ ನೆಲೆಗೆ ಪ್ರತಿಮೆ ಆಗುತ್ತದೆ.

ಈ ಕವನಗಳು ಪಂಚೇಂದ್ರಿಯಗಳ ಅನುಭವಕ್ಕೆ ಬರುವ ಶ್ರಾವಣದ ಮೂರ್ತರೂಪವನ್ನು ಹೀರುತ್ತಾ ಹೀರುತ್ತಾ ಕ್ರಮೇಣ ಅಮೂರ್ತದೆಡೆಗೆ ಸಾಗುತ್ತದೆ. ``ಸಣ್ಣ ಸೋಮುವಾರ'' ಅನುಭವದ ನೆನಕೆಯಲ್ಲಿ ಮೈ ಮರೆತಿದ್ದ ಕಡೆಗೆ ಸಾಗಿದರೆ `ಪ್ರತಿ ವರ್ಷದಂತೆ' ಕವನ ಅನುಭವದ ಮೈ ಮರೆಸುವಿಕೆಯೆಡೆಗೆ ಸಾಗುತ್ತದೆ. ಶ್ರಾವಣವನ್ನು ``ಜಗದ ಜೀವನಾ ಕರುಳ ಹೂವನಾ'' ಎಂದು ಕವಿ ಮೊದಲಿಗೇ ಗುರುತಿಸಿದ್ದಾರೆ.

ಮರಣಕ್ಕೆ ಆಹ್ವಾನ ನೀಡಿ ಹೆಣದಲ್ಲಿಯೂ ಪ್ರಾಣವನ್ನು ಪ್ರತಿಷ್ಠಾಪನೆ ಮಾಡಬಲ್ಲ ಶ್ರಾವಣದ ಸಾಮರ್ಥ್ಯದ ವಿಜೃಂಭಣೆ ಈ ಕವಿತೆಯಲ್ಲಿದೆ ಎಂಬುದು ಜಿ. ಎಸ್. ಆಮೂರರ ವಿವರಣೆ.

'ಮೆಚ್ಚಿತು ಶಿವನ ಮನಕೆ'

ಎನ್ನುವಲ್ಲಿ ಸೃಷ್ಟಿಗೀತವಾದ 'ಶ್ರಾವಣ' ಮತ್ತು `ಶ್ರಾವಣ ಗೀತ' ಈ ಎರಡರಲ್ಲಿ ಸೃಷ್ಟಿ ಗೀತದಲ್ಲಿ ಲೀನಗೊಂಡ ಮನಸ್ಸು ಹಾಡಿದ ಶ್ರಾವಣ ಗೀತ ತನ್ನ

(ಪುಟ 15ಕ್ಕೆ)

# ಸಂಮೋಹಿನಿ ಚಿಕಿತ್ಸೆ - 9

● ಡಾ| ಉಷಾರಾವ್

ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಫೇಲಾಗಲು ಕಾರಣಗಳು ಹಾಗೂ ಪರಿಹಾರೋಪಾಯಗಳು

ವಿಷ ಸೇವಿಸಿ ಎಸ್.ಎಸ್.ಎಲ್.ಸಿ. ಅಭ್ಯರ್ಥಿ ಶೈಲಾ ಮರಣ: ಬಿ.ಕಾಂ. ಪರೀಕ್ಷೆಯಲ್ಲಿ ಫೇಲಾದ ಇಬ್ಬರು ಯುವಕರ ಧಾರುಣ ಆತ್ಮ ಹತ್ಯೆ: ಫೈನಲ್ ಎಂ.ಬಿ.ಬಿ.ಎಸ್. ಪರೀಕ್ಷೆಯಲ್ಲಿ ಫೇಲಾದ ಸುದ್ದಿ ಕೇಳಿ ತರುಣಿ ಮೀನಾ, ಬಾವಿಗೆ ಹಾರಿ ಮರಣ ...

- ಪ್ರತಿ ವರ್ಷ ಜೂನ್-ಜುಲೈ ತಿಂಗಳುಗಳಲ್ಲಿ ಇಂಥ ದುರಂತಗಳ ಪತ್ರಿಕಾ ವರದಿಗಳನ್ನು ನಾವು ಓದುವುದು ಸರ್ವೇ ಸಾಮಾನ್ಯ.

ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಪರೀಕ್ಷಾ ಮಂಡಳಿಗಳು ಹಾಗೂ ವಿಶ್ವ ವಿದ್ಯಾನಿಲಯಗಳು ಸಾಮಾನ್ಯವಾಗಿ ತಮ್ಮ ಪರೀಕ್ಷೆಗಳಲ್ಲಿ ಸುಮಾರು ಶೇಕಡ 50ರಷ್ಟು ವಿದ್ಯಾರ್ಥಿಗಳನ್ನು ಫೇಲ್ ಎಂದು ಪ್ರಕಟಿಸುವುದು ವಾಡಿಕೆಯಾಗಿದೆ. ಫೇಲಾದ ವಿದ್ಯಾರ್ಥಿಗಳು ಸಹಜವಾಗಿಯೇ ನಿರಾಶರಾಗುತ್ತಾರೆ ಮತ್ತು ಅವರಲ್ಲಿ ಕೆಲವರು ತೀವ್ರ ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅದೂ ಅಲ್ಲದೆ ಅವರ ಕುಟುಂಬ ಸದಸ್ಯರಿಗೆ ತೀವ್ರ ದುಃಖ ಉಂಟಾಗುವುದರ ಜತೆಗೆ ಹಣಕಾಸಿನ ಸಮಸ್ಯೆಗಳೂ ಎದುರಾಗುತ್ತವೆ. ಇದರ ಇನ್ನೊಂದು ಸಂಕಟದ ಪರಿಣಾಮವೆಂದರೆ ಫೇಲಾದ ವಿದ್ಯಾರ್ಥಿ ಒಂದು ಇಡೀ ವರ್ಷ ವ್ಯರ್ಥವಾಗಿ ಕಳೆಯ ಬೇಕಾಗುತ್ತದೆ. ಇವೆಲ್ಲವೂ ದೇಶದ ಮಾನವ ಹಾಗೂ ಆರ್ಥಿಕ ಸಂಪನ್ಮೂಲಗಳು ಪೋಲಾಗುವುದಕ್ಕೆ ಕಾರಣವಾಗುವುವಲ್ಲವೇ?

ನಮ್ಮ ಪರೀಕ್ಷಾ ವ್ಯವಸ್ಥೆಯ ಇನ್ನೊಂದು ಅಂಶವನ್ನು ಪರಿಶೀಲಿಸುವುದು ಅಗತ್ಯವಾಗಿದೆ. ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳೂ ತಮ್ಮದೇ ಆದ ತೊಂದರೆಗಳು ಹಾಗೂ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವರಲ್ಲನೇಕ ಮಂದಿ ಘೋಷಿತ ಫಲಿತಾಂಶಗಳಿಂದ ಅಸಂತೃಪ್ತ ರಾಗಿರುತ್ತಾರೆ. ಅವರು ಪರೀಕ್ಷಕರ ಪ್ರಾಮಾಣಿಕತೆ ಬಗ್ಗೆ ಸಂದೇಹಿಸಿ ಪರೀಕ್ಷಾ ವಿಧಾನದಲ್ಲಿ ಅನುಸರಿಸಬೇಕಾದ ನಿಷ್ಪಕ್ಷಪಾತತೆ ಹಾಗೂ ಕರಾರುವಾಕ್ಕಿ ಬಗೆಗೆ ಪ್ರಶ್ನಿಸಲಾರಂಭಿಸುತ್ತಾರೆ. ಆದುದರಿಂದ ನಮ್ಮ ಪರೀಕ್ಷೆಗಳಲ್ಲಿ ವೈಫಲ್ಯಗಳನ್ನು ತಡೆಗಟ್ಟಲು ಅಥವಾ ಫೇಲಾಗುವವರ ಸಂಖ್ಯೆಯನ್ನು ಕನಿಷ್ಠ ಮಿತಿಗಿಳಿಸಲು ಮಾರ್ಗಗಳನ್ನು ಕಂಡು ಹಿಡಿಯಲು ಸಂಬಂಧಪಟ್ಟ ಎಲ್ಲರೂ, ಅಂದರೆ ವಿದ್ಯಾರ್ಥಿಗಳು ಅವರ ಪೋಷಕರು ಮತ್ತು ಶಿಕ್ಷಕರು ಈ ವಿಷಯದ ಬಗೆಗೆ ಆಳವಾಗಿ ವಿವೇಚಿಸುವುದು ಅತ್ಯಗತ್ಯವಾಗಿದೆ.

ಮೊದಲಿಗೆ, ಇಷ್ಟೊಂದು ಭಾರೀ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಫೇಲಾಗಲು ಮುಖ್ಯ ಕಾರಣಗಳೇನಿರಬಹುದು ಎಂಬ ಬಗೆಗೆ ಪರಿಶೀಲಿಸೋಣ:

ಅ) ಅಧ್ಯಯನ ಅಥವಾ ತಿಳುವಳಿಕೆಯ ಅನ್ವಯದಲ್ಲಿ ವಿದ್ಯಾರ್ಥಿಯ ಅನಾದರ.

ಆ) ವಿದ್ಯಾರ್ಥಿ ವಿದ್ಯಾಭ್ಯಾಸದಲ್ಲಿ ಗಮನ ಕೇಂದ್ರೀಕರಿಸದಿರುವುದು.

ಇ) ವಿದ್ಯಾರ್ಥಿಗೆ ಒಳ್ಳೆಯ ಜ್ಞಾಪಕಶಕ್ತಿ ಇಲ್ಲದಿರುವುದು.

ಈ) ಪರೀಕ್ಷೆಯನ್ನು ಎದುರಿಸುವಲ್ಲಿ ವಿದ್ಯಾರ್ಥಿಗೆ ಹೆದರಿಕೆ ಅಥವಾ ಮನಃಕ್ಷೋಭೆ.

ಉ) ತಾವು ಕಲಿತುದುದನ್ನು ಪರೀಕ್ಷಕರ ಮುಂದೆ ಮಂಡಿಸಲು ಕೆಲವು ವಿದ್ಯಾರ್ಥಿಗಳು ಎದುರಿಸುವ ಕಷ್ಟ.

ಈಗ ಈ ಒಂದೊಂದು ಅಂಶವನ್ನೂ ವಿವರವಾಗಿ ಪರಶೀಲಿಸೋಣ:

(ಅ) ಅಧ್ಯಯನ ಅಥವಾ ತಿಳಿವಳಿಕೆಯ ಅನ್ವಯದಲ್ಲಿ ವಿದ್ಯಾರ್ಥಿಯ ಅನಾದರ:

ಈ ವಿಷಯದಲ್ಲಿ ತಂದೆತಾಯಿಯರ ಅಥವಾ ಪೋಷಕರ ಒಂದು ಸಾಮಾನ್ಯ ದೂರೆಂದರೆ ತಮ್ಮ ಮಕ್ಕಳು ಅಧ್ಯಯನದ ಮಹತ್ವವನ್ನು ಗುರುತಿಸುವುದಕ್ಕಿಂತ ಹೆಚ್ಚಾಗಿ ಈ ಬಾಹ್ಯ ಅಥವಾ ಅಪ್ರಸ್ತುತ ಆಸಕ್ತಿಗಳಲ್ಲಿ ಅವರ ಭಾವನಾತ್ಮಕ ಸಂಬಂಧ ಹೆಚ್ಚು ಗಟ್ಟಿಯಾದುದರಿಂದ ಓದಿಗಿಂತ ಹೆಚ್ಚಾಗಿ ಆಟಗಳತ್ತಲೇ ಒಲವು ತೋರುತ್ತಾರೆ ಎಂಬುದು.

ಈ ಪ್ರವೃತ್ತಿಯನ್ನು ಹತ್ತಿಕ್ಕುವುದು ಹೇಗೆ? -

**1. ವಿದ್ಯಾಭ್ಯಾಸದ ಮಹತ್ವದ ಬಗೆಗೆ ವಿದ್ಯಾರ್ಥಿಗಳಿಗೆ ಮತ್ತೆ ಮತ್ತೆ ಮನದಟ್ಟು ಮಾಡಿಸುವ ಮೂಲಕ:**

ವಿದ್ಯಾಭ್ಯಾಸವನ್ನು ಕಡೆಗಣಿಸಿ ಯಾವಾಗಲೂ ಆಟಕ್ಕೇ ಹೆಚ್ಚು ಗಮನ ಕೊಡುವುದರಿಂದ ದೀರ್ಘಾವಧಿಯಲ್ಲಿ ಯುವಕರ ಬಾಳು ನಾಶವಾಗುತ್ತದೆ. ಆದೇ ಚಿಕ್ಕಂದಿನಲ್ಲಿ ಬೆಳೆಸಿಕೊಂಡ ಒಳ್ಳೆಯ ಅಭ್ಯಾಸಗಳು ಹೊಸ ಹೊಸ ಅವಕಾಶಗಳನ್ನು ತೆರೆಯುತ್ತವೆ ಎಂಬುದನ್ನು ಶಿಕ್ಷಕರು ಪೋಷಕರು ಮತ್ತು ಸಾರ್ವಜನಿಕ ಸಂಸ್ಥೆಗಳೂ ಕೂಡ ಸತತವಾಗಿ ಪ್ರಚಾರ ಮಾಡಬೇಕು ಮತ್ತು ಒತ್ತಿ ನುಡಿಯಬೇಕು.

**2. ಮನೆಗಳಲ್ಲಿನ ವಾತಾವರಣವನ್ನು ಉತ್ತಮ ಪಡಿಸುವ ಮೂಲಕ:**

ವಿದ್ಯಾರ್ಥಿಗಳ ಮುಂದೆ ಒಂದು ಉದಾಹರಣೆಯನ್ನು ಮಂಡಿಸಿದ ಹೊರತು ಕೇವಲ ಉಪದೇಶ ಅಥವಾ ನೀತಿಬೋಧೆಗಳಿಂದ ಪ್ರಯೋಜನವಾಗುವುದಿಲ್ಲ. ಕೆಲವರು ಪೋಷಕರಲ್ಲಿ ಓದುವ ಅಭ್ಯಾಸಗಳಿರುವುದಿಲ್ಲ. ಮತ್ತೆ ಕೆಲವರು ಕೇವಲ ಕಾಲ ಕಳೆಯುವುದಕ್ಕಾಗಿ ಕಳಪೆ ಪುಸ್ತಕಗಳು, ಅಗ್ಗದ ಕಾದಂಬರಿಗಳು ಅಥವಾ ಉದ್ರೇಕಕಾರಿ (Sensational) ಸುದ್ದಿಗಳುಳ್ಳ ಪತ್ರಿಕೆಗಳನ್ನು ಮಾತ್ರ ಓದುತ್ತಾರೆ. ಮಕ್ಕಳು ಅನುಕರಣಶೀಲರು. ಆದುದರಿಂದ ಪೋಷಕರು ಉಜ್ವಲ ಉದಾಹರಣೆಗಳನ್ನು ಅವರ ಮುಂದಿಡಬೇಕು. ಕೆಲವು ಮನೆಗಳಲ್ಲಿ ಟಿ.ವಿ. ಮತ್ತು ರೇಡಿಯೋ ಸದಾ ``ಆನ್'' ಆಗಿರುತ್ತವೆ. ಇದು ವಿದ್ಯಾರ್ಥಿಗಳ ಗಮನವನ್ನು ಬೇರೆಡೆಗೆ ಸೆಳೆಯುತ್ತದೆ. ಆದುದರಿಂದ ಕಿರಿಯರು ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ನೀಡುವಂತೆ ಪ್ರೋತ್ಸಾಹಿಸಲು ಮನೆಯಲ್ಲಿ ಉತ್ತಮ ವಾತಾವರಣವನ್ನು ಕಲ್ಪಿಸಲು ಎಚ್ಚರಿಕೆ ವಹಿಸಬೇಕು.

**3. ಚಿಕ್ಕಂದಿನಿಂದಲೇ ವಿದ್ಯಾರ್ಥಿಗಳಲ್ಲಿ ಉತ್ತಮ ಧೋರಣೆಯನ್ನು ಬೆಳೆಸುವ ಮೂಲಕ:**

ಶೈಶವಾವಸ್ಥೆ ಮನುಷ್ಯ ಜೀವನದಲ್ಲಿ ಅತ್ಯಂತ ಮೆತುವಾದ ಅವಧಿ. ಆದುದರಿಂದ ಮಕ್ಕಳಿಗೆ ಪ್ರಾರಂಭದ ಹಂತಗಳಲ್ಲಿಯೇ ಹಿರಿಯರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಮಾಡುವಂತೆ ಪ್ರೋತ್ಸಾಹಿಸಬೇಕು. ಮುಂದೆ ಅವರೇ ಆ ಆಸಕ್ತಿಗಳನ್ನು ಬೆಳೆಸಿಕೊಳ್ಳುತ್ತಾರೆ. ಆಗ ಪೋಷಕರು ಶಾಲೆಗಳಲ್ಲಿ ನಿಗದಿ ಮಾಡಲಾದ ಪಠ್ಯ ವಿಷಯಗಳನ್ನು ಹೆಚ್ಚು ಕಡಿಮೆ ಆಧರಿಸಿ ಮಕ್ಕಳ ಆಸಕ್ತಿಗಳನ್ನು ಇನ್ನೂ ಹೆಚ್ಚು ಉಪಯುಕ್ತ ವಿಷಯಗಳತ್ತ, ಉದಾಹರಣೆಗೆ ಡ್ರಾಯಿಂಗ್ ಮತ್ತು ಅಕ್ಷರಗಳ ಪೇಂಟಿಂಗ್, ಮತ್ತು ಸರಿಯಾದ ಸ್ಥಳಗಳಲ್ಲಿ ಟ್ರಯಾಂಗಲ್‌ಗಳು, ಸ್ಕ್ವೇರ್‌ಗಳು ಮುಂತಾದುವನ್ನು ಇಡುವುದು ಇತ್ಯಾದಿಯಾಗಿ ವಿಸ್ತತಗೊಳಿಸಬಹುದು. ಈ ಬಗೆಯ ``ಕ್ರೀಡಾತ್ಮಕ'' ತರಬೇತಿ ಅವರಲ್ಲಿ ವಿದ್ಯಾಭ್ಯಾಸದ ಬಗೆಗೆ ಸರಿಯಾದ ಧೋರಣೆ ಬೆಳೆಯುವಂತೆ ಮಾಡುವುದು.

**4. ನಿರ್ಲಕ್ಷ್ಯ ಅಥವಾ ಅಪರಾಧಿ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಶಿಕ್ಷಿಸುವ ಮೂಲಕ:**

ಕಳೆದ ಶತಮಾನದಲ್ಲಿ ಹಳ್ಳಿಗಳ ಶಾಲೆಗಳಲ್ಲಿ ಶಿಕ್ಷಕರು ಅನುಸರಿಸುತ್ತಿದ್ದ ವಿಧಾನ ``ಉಳಿಪೆಟ್ಟು ಬೀಳದೆ ವಿಗ್ರಹ ರೂಪುಗೊಳ್ಳುವುದಿಲ್ಲ'' ಎಂಬ ನಾಣ್ಣುಡಿಗೆ ಅನುಗುಣವಾಗಿರುತ್ತಿತ್ತು. ಈ ಅತಿರೇಕದ ದೃಷ್ಟಿ ಸಹಜವಾಗಿಯೇ ಖಂಡನೆಗೆ ಗುರಿಯಾಯಿತು. ಆದರೆ ಇದು 20 ಅಥವಾ 25 ವರ್ಷಗಳ ಹಿಂದೆ ಪ್ರಚಲಿತವಾಗಿದ್ದ ``ಮಕ್ಕಳನ್ನು ಶಿಕ್ಷಿಸಲೇ ಬಾರದು. ಏಕೆಂದರೆ ಶಿಕ್ಷೆ ಅವರಲ್ಲಿ ಹಟಮಾರಿತನ ಉಂಟು ಮಾಡುತ್ತದೆ'' ಎಂಬ ಇನ್ನೊಂದು ಅತಿರೇಕದ ದೃಷ್ಟಿಗೆ ಹಾದಿ ಮಾಡಿತು. ಈಚಿನ ವರ್ಷಗಳಲ್ಲಿ ಈ ಅಭಿಪ್ರಾಯವನ್ನೂ ತಿರಸ್ಕರಿಸಲಾಗಿದೆ. ಇಂದು ಸುದೀರ್ಘ ಹಾಗೂ ತೀವ್ರ ಸಂಶೋಧನೆಯ ನಂತರ

ಶಿಕ್ಷಣವೇತ್ತರು ``ತಪ್ಪು ಮಾಡುವ ಮಕ್ಕಳಿಗೆ ಒಂದಲ್ಲ ಒಂದು ಬಗೆಯ ಶಿಕ್ಷೆ ಅಗತ್ಯ ಹಾಗೂ ಅಪೇಕ್ಷಣೀಯ'' ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ಶಿಕ್ಷೆಯ ಸ್ವರೂಪ ಎಂಥದು ಎಂಬುದು ಬಹಳ ಮುಖ್ಯ ವಿಷಯವಾಗಿದೆ.

**5. ವಿದ್ಯಾಭ್ಯಾಸದಲ್ಲಿ ಒಳ್ಳೆಯ ಪ್ರಗತಿ ತೋರುವ ವಿದ್ಯಾರ್ಥಿಯನ್ನು ಪ್ರಶಂಸಿಸುವ ಮೂಲಕ:**

ಶಿಕ್ಷಕರು ಬುದ್ಧಿಶಾಲಿ ವಿದ್ಯಾರ್ಥಿಯ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸುವುದು ಮತ್ತು ಇಡೀ ತರಗತಿಯಲ್ಲಿ ಅವನನ್ನು ಉದಾಹರಣೆಯಾಗಿ ಎತ್ತಿ ಹಿಡಿಯುವುದು ಒಂದು ಆರೋಗ್ಯಕರ ಅಭ್ಯಾಸ. ಅನೇಕ ಸಂದರ್ಭಗಳಲ್ಲಿ ಶಿಕ್ಷೆಗಿಂತ ಪ್ರಶಂಸೆ ಉಪಯೋಗಕ್ಕೆ ಬರಬಹುದು. ಆದುದರಿಂದ ಶಿಕ್ಷಕರು ಮತ್ತು ಪೋಷಕರು ಯಶಸ್ವೀ ವಿದ್ಯಾರ್ಥಿಯನ್ನು ಪ್ರಶಂಸಿಸುವ ಮತ್ತು ಬಹುಮಾನಿಸುವ ಅವಕಾಶವನ್ನು ಎಂದಿಗೂ ಕಳೆದುಕೊಳ್ಳಕೂಡದು. ಆಗ ವಿದ್ಯಾರ್ಥಿ ಇನ್ನೂ ಹೆಚ್ಚು ಪ್ರಯತ್ನ ಮಾಡಲು ಉತ್ತೇಜಕನಾಗುತ್ತಾನೆ. ಒಳ್ಳೆಯ ಮಾರ್ಗದರ್ಶನ ಮತ್ತು ಸಲಹೆ ಉತ್ತೇಜನಕಾರಿ ಫಲಿತಾಂಶಗಳನ್ನು ನೀಡುವುವು.

---

## ಬೇಂದ್ರೆ ಕಂಡ ಶ್ರಾವಣ

*(ಪುಟ 13ರಿಂದ)*

ಸಾರ್ಥಕತೆಯನ್ನು ಶಿವನ ಮೆಚ್ಚಿನಲ್ಲಿ ಕಂಡಿರುವಂತಿದೆ.

ಇಲ್ಲಿ ಪೌರಾಣಿಕ, ಚಾರಿತ್ರಿಕ ನೆಲೆಗಳಲ್ಲಿ ಶ್ರಾವಣದ್ದೇ ಒಂದು ಚಕ್ರಗತಿಯನ್ನು ಗುರುತಿಸಿದೆ. ಈ ಚಕ್ರಗತಿ, ಲಯ ಒಂದು ಸೂತ್ರಕ್ಕೆ ಪ್ರೇರಣೆ ನೀಡಿದೆ.

ಶ್ರಾವಣ ಗೀತೆ ಸ್ವಾತಂತ್ರ್ಯಾಪೇಕ್ಷ ಗೀತೆಯಾಗಿದೆ. ನಾಡ, ಜಗದ ಕಾಳಜಿ ಉಳ್ಳ ಗೀತೆಯಾಗಿದೆ. ಭೂತಭವಿಷ್ಯತ್, ವರ್ತಮಾನಗಳ ಸಂಬಂಧ ಹೊಂದಿದ್ದು, ವ್ಯಕ್ತಿ, ಸಮೂಹವನ್ನು ಈ ಕವನ ತನ್ನೊಳಗೆ ತೆಗೆದು ಕೊಂಡಿದೆ.

``ಕತ್ತಲೆಯ ತುತ್ತ ತುದಿ ಹತ್ತಿರವೆ ಬೆಳಕು ಬದಿ ಎಂದು ಸಾರೇ ಶ್ರಾವಣಾ'' ಎನ್ನುವ ಕವಿತೆ ವಿಶ್ವನಿಯತಿಯ ಹಿನ್ನೆಲೆಯಲ್ಲಿ ಶ್ರಾವಣ ಪೂರ್ವ ಮತ್ತು ಶ್ರಾವಣ ಕಾಲೀನ ಪರಿಸರವನ್ನು ಅರ್ಥ ಮಾಡಿಕೊಳ್ಳುತ್ತದೆ.

`ನಮನ' ಸಂಕಲನದ ``ಮಧು ಮಾಸದ ಕುಣಿತ''ದಲ್ಲಿ ದ್ವಾಪರದಿಂದ ಸ್ವಾತಂತ್ರ್ಯೋತ್ತರದ ವರೆಗಿನ ಜೀವನ ಗತಿಯ ಕತ್ತಲು ಬೆಳಕಿನ ಚಕ್ರದ ಒಳತಿರುಳು ಕವನದೊಳಗೆ ಹರಿಯುತ್ತದೆ.

'ಭಾರತೀಯ ಸ್ವಾತಂತ್ರ್ಯವು ಉದ್ಭವಿಸಿದ ದಿನ'ದಲ್ಲಿ,

'ಈಶ ಭಕ್ತಿ, ದೇಶ ಭಕ್ತಿ ಸಾಮರಸ್ಯ ಕ್ಷೇತ್ರದಿ

ಕಂಡೆವಣ್ಣ ಬೇರೆ ಕನಸ ನಮ್ಮ ಹೃದಯದಿ'

ಎಂದು ಕನಸು ಕಾಣುತ್ತಾರೆ.

``ಮುಗಿಲ ತಂದೆ, ಭೂಮಿ ತಾಯಿ, ಮಗು ಶ್ರಾವಣ'' ಎಂದು ಕೌಟುಂಬಿಕ ಪರಿಸರವನ್ನೇ ಕವಿ ಸೃಷ್ಟಿಸುತ್ತಾರೆ.

ಅನುಭಾವಿಕತೆ - ನಿಸರ್ಗ - ಮನುಷ್ಯ ಇವು ಮೂರು ತ್ರಿಕೋನ ಸಂಬಂಧದ ಮೂರು ಬಿಂದುಗಳು.

`ನಾಕು ತಂತಿ'ಯಲ್ಲಿನ `ಮತ್ತ ಶ್ರಾವಣಾ' ಅವರು ಬರೆದ ಕೊನೆಯ ಶ್ರಾವಣ ಗೀತವಾಗಿದೆ.

ಬೇಂದ್ರೆಯವರ ಕಾವ್ಯ ಸೃಷ್ಟಿಯ ಒಂದು ಮುಖ್ಯ ಪ್ರೇರಕ ಶಕ್ತಿಯಾದ ಶ್ರಾವಣ ಅವರ ಕಾವ್ಯದಲ್ಲಿ ಒಂದು ಮೂಲ ಪ್ರತಿಮೆ, ಜೀವನೋಲ್ಲಾಸ ಮತ್ತು ಅನುಭಾವಿಕ ಶ್ರದ್ಧೆಯನ್ನು ಪ್ರತಿ ಮಿಸುವ ನೆಲೆ. ಕವಿಯ ಪಾಲಿಗೆ ಶ್ರಾವಣ ಕೇವಲ ಒಂದು ಋತುವಲ್ಲ, ಅನೇಕ ಭಾವ ಲಯಗಳ ಮಹಾದ್ವಾರ. ಜೀವನದ ಅನೇಕ ನಿರೀಕ್ಷೆ ಕಾತರಗಳನ್ನು ಹುಟ್ಟಿಸುವಂಥದು. ಜೀವನ ಮಂಥನವನ್ನು ಉದ್ದೀಪಿಸುವಂಥದು. ಇಲ್ಲಿ ಶ್ರಾವಣವು ವ್ಯಕ್ತಿ, ರಾಷ್ಟ್ರ ಹಾಗೂ ವಿಶ್ವ ಜೀವನದ ಚಲನೆಯ ಒಂದು ಮುಖ್ಯ ಬಿಂದು. ಭೂತ, ಭವಿಷ್ಯ, ವರ್ತಮಾನದ ಅನೇಕ ವೈಯಕ್ತಿಕ, ಸಾಮೂಹಿಕ ಸಂಗತಿಗಳ ಚಿಂತನ, ಮಂಥನ, ಭಾವ ಸ್ಪಂದನಕ್ಕೆ ಕೈ ತೊಡಗಿಸುವಂಥ ಶಕ್ತಿ, ಪಂಥ ಒಂದು ಶಕ್ತಿ. ಈ ಅರ್ಥದಲ್ಲಿ ಶ್ರಾವಣ ಕವಿಯ ಹೊರಗಿನ ಆವರಣವಲ್ಲ. ಕವಿಯ ಒಳ ಹೊರಗನ್ನು ಕ್ರಿಯಾಶೀಲವಾಗಿಸುವ ಸೃಜನಾತ್ಮಕ ಪ್ರೇರಣೆಯನ್ನು ಕೊಡುವಂಥ ಒಂದು ವಿಶಿಷ್ಟ ಸತ್ವವಾಗಿದೆ. ಅಂತೆಯೇ ಈ ಅನುಭವದ ನೆಲೆ ಬೇಂದ್ರೆ ಕಾವ್ಯದ ಉದ್ದೇಶಿತ ನೆಲೆಯಿಂದ ಅನುಭವಕ್ಕೆ ಒಂದು ಮುಖ್ಯ ಹೆಚ್ಚಣಿಕೆ ಆಗಿದೆ ಎಂದು ಡಾ। ವಿಜಯಾ ದಬ್ಬೆ ಅಭಿಪ್ರಾಯ ಪಡುತ್ತಾರೆ.

ಮೊದ ಮೊದಲಿನ ಅವರ ಶ್ರಾವಣ ಗೀತೆಗಳಿಗೂ ನಂತರದ ಶ್ರಾವಣ ಗೀತಗಳಿಗೂ ಇರುವ ಅಂತರ ಅವರ ಕಾವ್ಯದಲ್ಲಿನ ಆಂತರಿಕ ಬೆಳವಣಿಗೆಗೆ ಸ್ಪಷ್ಟವಾದ ಕುರುಹು ಆಗಿದೆ. ಪ್ರಾರಂಭದ ಕವಿತೆಗಳಲ್ಲಿ ನಿಸರ್ಗ-ವೈಭವ ತನ್ನ ಸಮಗ್ರ ಸೌಂದರ್ಯದಿಂದ ಪಂಚೇಂದ್ರಿಯಗಳನ್ನು ತಣಿಸಿದರೆ ಕೊನೆಯ ಗೀತಗಳಲ್ಲಿ ನಿಸರ್ಗದ ಸುಳಿವಿಲ್ಲ. ಶ್ರುತಿ-ಕೃತಿ ಇವುಗಳ ಸಮನ್ವಯ ಶ್ರಾವಣಮೂಲ ಪ್ರತೀಕವಾಗಿದೆ. ಹೀಗೆ ಬೇಂದ್ರೆಯವರ ಕಾವ್ಯದಲ್ಲಿ ಶ್ರಾವಣ ಪ್ರತಿಭೆ ತಾನೇ ತಾನಾಗಿದೆ.

ಒಟ್ಟಿನಲ್ಲಿ ಬೇಂದ್ರೆಯವರಿಗೆ ಶ್ರಾವಣ ಮಾಸ ಬಂದಾಗೊಮ್ಮೆ ಪೂರ್ವಜರ ನೆನಪು, ಪ್ರಣಯ ಆನಂದ, ಚಿಂತೆ, ದುಃಖ ಮೊದಲಾದುವುಗಳನ್ನು ಸ್ಮರಣೆ ಆಗುವುದು ಸಹಜ. ಈ ಎಲ್ಲದರೊಳಗಿಂದ ತಾನು ಪಾರಾಗಲು ಷಡ್ಗುಣೈಶ್ವರ್ಯಶಾಲಿ ಭಗವಂತನೆ ಕಾರಣ ಎಂಬುದು ಅವರ ಶ್ರದ್ಧೆ. ಅವನನ್ನು ತಾವು ಮರೆಯಬಾರದು. ಅವನ ಭಜನೆ ಸತತವಾಗಿ ಮಾಡಬೇಕು ಎಂಬ ಅರಿವಿಗೆ ಬಂದು ಮುಟ್ಟುತ್ತಾರೆ.

(ಸಂಗ್ರಹ)

---

## ಮುಂಬೈ ಮೈಸೂರ್ ಅಸೋಸಿಯೇಷನ್ ಸವಿನೆನಪು

*(ಪುಟ 4ರಿಂದ)*

ಏರ್ಪಾಡು ಮಾಡ್ಕೊಂಡು, ಒಳ್ಳೆ ಮದ್ವೆ ದಿಬ್ಬಣ ಹೊರಡೊ ಹಾಗೆ (ಬಾಜ ಬಜಂತ್ರಿ ಇರ್ತಾ ಇರಲಿಲ್ಲ ಅಷ್ಟೆ). ಮಹಿಳಾ ವಿಭಾಗದವರೆಲ್ಲಾ ಅಸೋಸಿಯೇಷನ್‌ನಿಂದ ಹೊರಟು ಅಲ್ಲಿಗೆ ಭೇಟಿ ಕೊಡ್ತಾ ಇದ್ವು. ಹೋದ ಕಡೆಯಲ್ಲೆಲ್ಲಾ ನಮಗೆ V.I.P. Treatment ಸಿಗ್ತಾ ಇತ್ತು. ಗೈಡ್ ಗೊತ್ತು ಮಾಡಿರುತ್ತಿದ್ರು, ಅವರು ನಮಗಳಿಗೆಲ್ಲಾ Explain ಮಾಡಿ, ಎಲ್ಲವನ್ನೂ ತೋರಿಸಿ ಕೊಂಡು ಬರ್ತಾ ಇದ್ರು. ನಾವುಗಳು ಅಲ್ಲೆಲ್ಲಾ Visit ಮಾಡಿ ಬಂದ ಮೇಲೆ, ಅಲ್ಲೆಲ್ಲಾ ಯೇನೇನ್ ಮಾಡ್ತಾರೆ, ಹೇಗೆ ಮಾಡ್ತಾರೆ, ಹೇಗಿರುತ್ತೆ ಅನ್ನೊ ವಿಷಯದ ಮೇಲೆ Essay Competition ಇಡ್ತಾ ಇದ್ರು. ವರ್ಷವೆಲ್ಲಾ ಒಂದಲ್ಲಾ ಒಂದು ಕಾರ್ಯಕ್ರಮ ನಡಿತಾನೆ ಇದ್ವು. ಪಿಕ್‌ನಿಕ್‌ಗಳಿಗೆ ಹೋಗ್ತಾ ಇದ್ವು. ಅಸೋಸಿಯೇಷನ್ನಿನ್ನಲ್ಲೇ ಚಲನ ಚಿತ್ರ ತೋರಿಸುವ ಏರ್ಪಾಡು ಮಾಡ್ತಾ ಇದ್ರು. ಮತ್ತು Republic Dayಗೆ, ಅಸೋಸಿಯೇಷನ್‌ಗೆ ಮಹಿಳಾ ವಿಭಾಗದ ಪರವಾಗಿ, ಕನಕದಾಸರ ಒಂದು ದೇವರ ನಾಮವನ್ನು ಆದರಿಸಿ, ``ಚಿನ್ಮಯ ರೂಪ'' ಅನ್ನೊ ಬ್ಯಾಲೆ ಕೊಟ್ಟಿದ್ವು. ಬಹಳ ಯಶಸ್ವಿಯಾಗಿ ನಡೆದು, ಎಲ್ಲರ ಮೆಚ್ಚಿಕೆಯನ್ನು ಪಡೆದಿತ್ತು. ಅದೇ ಮೊದಲು ಈ ತರಹ ಬ್ಯಾಲೆ ಅಸೋಸಿಯೇಷನ್‌ನ್ನಲ್ಲಿ ಆದದ್ದು. ಮತ್ತು ಯುಗಾದಿ ಹಬ್ಬ ಯಾವ ತರಹ ಆಚರಿಸುತ್ತಾರೆ ಅನ್ನೊದರ ಮೇಲೆ ಸಹ, ಒಂದು ಬ್ಯಾಲೆಯನ್ನು ಮಾಡಿತ್ತು; ಅದಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳು ನಾಟ್ಯ, Group Singing, ಬೆಳದಿಂಗಳ ಊಟ, ಎಲ್ಲಾ ನಡಿತಾ ಇತ್ತು. ಒಟ್ನಲ್ಲಿ ಹೇಳೊದಾದ್ರೆ, ಆಗಿನ ಅಸೋಸಿಯೇಷನ್ ವಾತಾವರಣ, ಆಗಿನವರಲ್ಲಿದ್ದ ಹೊಂದಾಣಿಕೆ, ಮತ್ತು ಅಸೋಸಿಯೇಷನ್ ತಮ್ಮ ಮನೆ, ಅಲ್ಲಿ ನಡೆಸುತ್ತಿದ್ದ ಕಾರ್ಯಕ್ರಮಗಳು ತಮ್ಮ ಮನೆಯದೆಂದೇ ತಿಳಿದು, ಸಂಭ್ರಮದಿಂದ ಆಚರಿಸುತ್ತಿದ್ದ ಬಗೆ, ಕಾರ್ಯದರ್ಶಿಗಳ ಕಾರ್ಯ ದಕ್ಷತೆ, ಅದೆಲ್ಲಾ ಹಚ್ಚ ಹಸಿರಿನಂತೆ, ನಿತ್ಯ ನೂತನದ ಅಚ್ಚಳಿಯದ ಸವಿನೆನಪು.

Regn. No. 040015/86
Regn. No. MH/By/NE121/95

# ಸ್ವಾತಂತ್ರ್ಯದಿಂದ ಸ್ವಾವಲಂಬನೆಯತ್ತ
## 50ನೇ ಸ್ವಾತಂತ್ರ್ಯೋತ್ಸವ

(ದಿ: 15-08-1996)

ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಪೂರ್ಣ ಸ್ವರಾಜ್ಯಕ್ಕೆ ಕರೆ ನೀಡಿದಾಗ ಅವರ ಉದ್ದೇಶವನ್ನು ಈಡೇರಿಸಲು ಇಡೀ ದೇಶ ಒಗ್ಗಟ್ಟಾಗಿ ಎದ್ದು ನಿಂತಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕವೂ ಮಹತ್ವದ ಪಾತ್ರ ವಹಿಸಿದೆ. 1857ರ ಮೊದಲ ಸ್ವಾತಂತ್ರ್ಯ ಹೋರಾಟಕ್ಕೆ ಬಹಳ ಮುಂಚಿತವಾಗಿಯೇ ಈ ರಾಜ್ಯದಲ್ಲಿ ದಂಗೆಯ ಕಹಳೆ ಮತ್ತು ಧ್ವಜ ಮೊಳಗಿತ್ತು. ದಶಕಗಳ ಹಿಂದೆಯೇ ಕಿತ್ತೂರಿನ ರಾಣಿ ಚೆನ್ನಮ್ಮ ವಿದೇಶೀ ಆಳ್ವಿಕೆಯ ವಿರುದ್ಧ ಬಂಡೆದಿದ್ದಳು. ಸಂಪದ್ಭರಿತ ಸ್ವತಂತ್ರ ದೇಶ ಸ್ವಾತಂತ್ರ್ಯ ಹೋರಾಟಗಾರರ ನಿಸ್ವಾರ್ಥ ಬಲಿದಾನದ ಉದ್ದೇಶ. ತಮ್ಮ ಮಕ್ಕಳಾದರೂ ಸ್ವಚ್ಛವಾದ ಸ್ವಾತಂತ್ರ್ಯದ ಗಾಳಿಯನ್ನು ಸೇವಿಸಲಿ ಎಂಬುದು ಅವರ ಕನಸಾಗಿತ್ತು. ಸುಭದ್ರ ಭಾರತ ನಿರ್ಮಾಣವೂ ಅವರ ಗುರಿಯಾಗಿತ್ತು. ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಈ ದಿನದಂದು ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮದ ಸೇನಾನಿಗಳಿಗೆ ವಂದಿಸುತ್ತದೆ. ಕರ್ನಾಟಕ ನಮ್ಮ ರಾಷ್ಟ್ರ ಪಿತಾಮಹರ ಆದರ್ಶಗಳನ್ನು ಅನುಸರಿಸಿ ಜಾತ್ಯತೀತತೆ, ರಾಷ್ಟ್ರೀಯ ಸಮಗ್ರತೆ ಮತ್ತು ಸರ್ವರ ಕಲ್ಯಾಣ ಸಾಗಿಸುವ ಮೂಲಕ ಮಾದರಿ ರಾಜ್ಯವೆನಿಸಿದೆ.

ಕರ್ನಾಟಕ ಆರ್ಥಿಕ ಉದಾರೀಕರಣದ ಮುಂಚೂಣಿಯಲ್ಲಿದ್ದು, ಶ್ರೀ ಜೆ. ಎಚ್. ಪಟೇಲರ ಸಮರ್ಥ ಮಾರ್ಗದರ್ಶನದಲ್ಲಿ ಸರ್ವತೋಮುಖಿ ಪ್ರಗತಿ ಸಾಧಿಸುತ್ತಿದ್ದು ಮಾದರಿ ರಾಜ್ಯವಾಗಿ ರೂಪುಗೊಳ್ಳುತ್ತಿದೆ. 50ನೇ ಸ್ವಾತಂತ್ರ್ಯೋತ್ಸವ ಈ ಶುಭ ದಿನದಂದು ಕರ್ನಾಟಕ ಸರ್ಕಾರ ಸ್ವಾತಂತ್ರ್ಯ ಹೋರಾಟಗಾರರ ಕನಸುಗಳನ್ನು ನನಸಾಗಿಸುವ ತನ್ನ ಧ್ಯೇಯಗಳನ್ನು ಪುನರ್ ಉಚ್ಛರಿಸುತ್ತದೆ. ಸಬಲ ಹಾಗೂ ಸಮೃದ್ಧ ಕರ್ನಾಟಕ ನಿರ್ಮಾಣದತ್ತ, ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸಲು ಸರ್ಕಾರ ಕಂಕಣಬದ್ಧ.

### ಕೃಷಿ ಕ್ಷೇತ್ರಕ್ಕೆ ಆದ್ಯತೆ

ಮೊದಲ ಬಾರಿಗೆ ನವೀನ ಕೃಷಿ ನೀತಿ. ತೋಟಗಾರಿಕೆ ಮತ್ತು ಪುಷ್ಪೋದ್ಯಮ ಉತ್ಪಾದನೆಗಳ ರಫ್ತಿಗೆ ಹೆಚ್ಚಿನ ಒತ್ತು.

### ವಸತಿ ಹೀನರಿಗೆ ವರದಾನ

ಸರ್ಕಾರವು ವಸತಿ ಸಮಸ್ಯೆಯನ್ನು ಅದರಲ್ಲೂ ಮುಖ್ಯವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸಮಸ್ಯೆಯನ್ನು ಪರಿಹರಿಸಲು ಬದ್ಧವಾಗಿದೆ.

**ಹಳ್ಳಿ ಹಳ್ಳಿಗೆ ಕುಡಿಯುವ ನೀರು:-** ಶುದ್ಧವಾದ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರದ ಅತ್ಯುನ್ನತ ಆದ್ಯತೆ. ಗ್ರಾಮಾಂತರ ನೀರು ಸರಬರಾಜಿಗಾಗಿ 252.14 ಕೋಟಿ ರೂಪಾಯಿಗಳು.

**ಅರಣ್ಯೀಕರಣ:-** ಕಾಡುಗಳನ್ನು ರಕ್ಷಿಸಲು ವನ ವಿಜ್ಞಾನ ಕೇಂದ್ರಗಳ ಸ್ಥಾಪನೆ.

**ವಿದ್ಯುತ್ ಉತ್ಪಾದನೆಗೆ ಆದ್ಯತೆ:-** ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಹಲವು ಯೋಜನೆಗಳ ನಿರ್ಮಾಣ ಕಾರ್ಯಾರಂಭ. ಪಶ್ಚಿಮ ಕರಾವಳಿಯಲ್ಲಿ ಬಾರ್ಜ್‌ಮೌಂಟೆಡ್ ಯೋಜನೆಗಳ ಮುಖಾಂತರ 400 ಮೆ.ವಾ. ವಿದ್ಯುತ್.

**ಆರೋಗ್ಯ ಸೇವೆ ಸುಧಾರಣೆ:-** ಬಡ ಜನರಿಗೆ ಅತ್ಯಾಧುನಿಕ ವೈದ್ಯಕೀಯ ಸವಲತ್ತುಗಳನ್ನು ಒದಗಿಸಲು ಸೂಪರ್ ಸ್ಪೆಷ್ಯಾಲಿಟಿ ಆಸ್ಪತ್ರೆಗಳು. ಇದಕ್ಕಾಗಿ 550 ಕೋಟಿ ರೂ. ಮೀಸಲು.

**ಶಿಕ್ಷಣ:-** ಬಾಲಕಿಯರ ಶಿಕ್ಷಣಕ್ಕೆ ಪ್ರಥಮ ಆದ್ಯತೆ. ಶಾಲೆಗಳೇ ಇಲ್ಲದ 1264 ಸ್ಥಳಗಳಲ್ಲಿ ಶಾಲಾ ಸೌಕರ್ಯ. 9350 ಶಿಕ್ಷಕರ ನೇಮಕ.

**ಮಹಿಳಾ ಮತ್ತು ಮಕ್ಕಳ ಕಲ್ಯಾಣ:-** ಸರ್ಕಾರಿ ಉದ್ಯೋಗಗಳಲ್ಲಿ ಕಾಲೇಜುಗಳಲ್ಲಿ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಮಹಿಳೆಯರಿಗೆ ಮೀಸಲಾತಿ.

**ಸಮಾಜ ಕಲ್ಯಾಣ ಕಾರ್ಯಗಳು:-**

- 8.40 ಕೋಟಿ ರೂ. ವೆಚ್ಚದಲ್ಲಿ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗಾಗಿ 30 ವಿದ್ಯಾರ್ಥಿ ನಿಲಯಗಳು.
- ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ರೈತರಿಗಾಗಿ 5000 ಕೊಳವೆ ಬಾವಿಗಳು.
- ಹಿಂದುಳಿದ ಜಾತಿಗಳವರಿಗೆ ರೂ. 35.50 ಕೋಟಿ ಮತ್ತು ಅಲ್ಪಸಂಖ್ಯಾತರಿಗೆ ರೂ. 32.77 ಕೋಟಿ ನೆರವು.

**ಸ್ವಾತಂತ್ರ್ಯೋತ್ಸವದ ಶುಭಾಶಯಗಳು.**

ಕರ್ನಾಟಕ - ನಿರಂತರ ಪ್ರಗತಿಗೆ ನಿರ್ಣಾಯಕ ಹೆಜ್ಜೆಗಳು.

ಎಂವಿ: 13896

❀ **ಕರ್ನಾಟಕ ವಾರ್ತೆ.**

Edited, Printed & Published by M.A.N. Prasad on behalf of the Mysore Association, Mumbai- Tel.: 402 46 47
Laser Typset and Printed at Aarati Art Printers, Fort, Mumbai-400 001. * Tel.: 266 33 61/266 59 38